
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

14 ಜೂನ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 95 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತ ಮಹಿಳೆಯರ ಕ್ರಿಕೆಟ್ ತಂಡವು ಹತ್ತನೇ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ಬಳಗದ ಎದುರಿನ ಪಂದ್ಯದೊಂದಿಗೆ ತನ್ನ ಅಭಿಯಾನ ಆರಂಭಿಸಲಿದೆ.


ಕಾಡಿನ ನಡುವೆ ಕಟ್ಟಿಕೊಂಡ ಬದುಕು » 2


ಯಾರ ಹಿತಾಸಕ್ತಿಗಾಗಿ ಬಿಡದಿ ಟೌನ್‌ಶಿಪ್ ಯೋಜನೆ » 3


ಯಗಚಿ ಜಲಾಶಯದಲ್ಲಿ ಕುಸಿಯುತ್ತಿದೆ ನೀರಿನ ಮಟ್ಟ » 4

# ರಸಗೊಬ್ಬರ, ಬಿತ್ತನೆ ಬೀಜ ಕೊರತೆಯಾಗದಿರಲಿ

## ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಸಿ.ಎಂ. | ಜನಸ್ನೇಹಿ ಆಡಳಿತಕ್ಕೆ ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ಕೃಷಿ ಚಟುವಟಿಕೆಗೆ ರಸಗೊಬ್ಬರ ಹಾಗು ಬಿತ್ತನೆ ಬೀಜದ ಕೊರತೆಯಾಗಬಾರದು, ಜಲಾಶಯಗಳಲ್ಲಿ ನೀರಿನ ಸಂಗ್ರಹವನ್ನು ಸಮರ್ಪಕವಾಗಿ ಕಾಯ್ದುಕೊಳ್ಳುವ ಮೂಲಕ ಕುಡಿಯುವ ನೀರಿಗೆ ಅಬಾವ ಆಗದಂತೆ ಎಚ್ಚರಿಕೆ ವಹಿಸಬೇಕು. ಶೈಕ್ಷಣಿಕ ಚಟುವಟಿಕೆಗಳ ವಿಚಾರದಲ್ಲಿ ನಿಗಾ ವಹಿಸಬೇಕೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೂಚನೆ ನೀಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಸೇರಿ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಅವರು, ಆಡಳಿತ ಯಂತ್ರವನ್ನು ಮತ್ತಷ್ಟು ಚುರುಕುಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುವಂತೆ ನಿರ್ದೇಶನ ನೀಡಿದರು.

ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವ ಮೂಲಕ ಆಡಳಿತ ಜನಪರವಾಗಿದೆ ಎಂಬುದನ್ನು ಖಚಿತಪಡಿಸಬೇಕು. ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಜೊತೆಗೆ ಸಮಸ್ಯೆಗಳಿಗೂ ತ್ವರಿತವಾಗಿ ಸ್ಪಂದಿಸುವಂತೆ ಸೂಚಿಸಿದ್ದಾರೆ. ರಸಗೊಬ್ಬರದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕೆಲವು ಕಡೆ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಪರಿಸ್ಥಿತಿಯನ್ನು ಜಿಲ್ಲಾಡಳಿತ ಸೂಕ್ಷ್ಮವಾಗಿ ನಿಬಾಯಿಸಬೇಕು. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕೆಂದು ಸಲಹೆ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಮುಂಗಾರು ಕೊರತೆಯ ಮುನ್ಸೂಚನೆ ಇದೆ. ಹವಾಮಾನ ವರದಿಗೆ ಅನುಗುಣವಾಗಿ ಕೃಷಿ ಬೆಳೆಗಳನ್ನು ಬೆಳೆಯಲು ರೈತರಿಗೆ ಮಾರ್ಗದರ್ಶನ ನೀಡಬೇಕು. ಎಲ್ಲಾ ಜಿಲ್ಲೆಗಳಲ್ಲಿ ಕೈಗಾರಿಕೆಗಳಿಗೆ ಪೂರಕವಾದ ವಾತಾವರಣ ನಿರ್ಮಾಣವಾಗಬೇಕು. ಅನಗತ್ಯವಾಗಿ ನಿಯಮಗಳ ನೆಪ ಹೇಳಿ ತೊಂದರೆ ಕೊಡಬಾರದು, ಭೂ ಪರಿವರ್ತನೆ, ಮಂಜೂರಾತಿ ಸೇರಿ ಹಲವಾರು ವಿಚಾರಗಳಲ್ಲಿ ವಿಳಂಬ ಸರಿಯಲ್ಲ ಎಂದು ಎಚ್ಚರಿಕೆ ನೀಡಿದರು.

ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಬೇಕು. ಅನರ್ಹರನ್ನು ಪತ್ತೆಹಚ್ಚಿ ಕಠಿಣ ಕ್ರಮ ಕೈಗೊಳ್ಳಬೇಕು. ರಸ್ತೆ ಸುಧಾರಣೆ, ಮೂಲ ಸೌಲಭ್ಯಗಳ ಸೃಷ್ಟಿ, ಮಳೆ ಅನಾಹುತಗಳ ಮುನ್ನೆಚ್ಚರಿಕೆ ಸೇರಿ ಹಲವಾರು ವಿಚಾರಗಳಲ್ಲಿ ಕಾಳಜಿ ವಹಿಸುವಂತೆ ಆದೇಶಿಸಿದ್ದಾರೆ.

ಶಾಲಾ ಶೈಕ್ಷಣಿಕ ವರ್ಷ ಆರಂಭವಾದ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು, ಅಂಗನವಾಡಿ ಮಕ್ಕಳ ದಾಖಲಾತಿ, ಆರೋಗ್ಯ ಹಾಗು ಇತರ ವಿಷಯಗಳ ಕುರಿತು ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸಲಾಯಿತು.

» 4ನೇ ಪುಟದಲ್ಲಿ




### ಏಳು ಗಂಟೆ ನಿರಂತರ ಸಭೆ ನಡೆಸಿದ ಸಿ.ಎಂ.

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಸೇರಿ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶನಿವಾರ ನಿರಂತರ ಏಳು ಗಂಟೆಗಳ ಕಾಲ ಸಭೆ ನಡೆಸಿದರು.

ಅಧಿಕಾರಿಗಳಿಂದ ಜಿಲ್ಲಾವಾರು ಮಾಹಿತಿ ಪಡೆದ ಅವರು, ಕರ್ತವ್ಯ ಲೋಪವನ್ನು ಯಾವ ಕಾರಣಕ್ಕೂ ಸಹಿಸವುದಿಲ್ಲ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ಎಲ್ಲಾ ಹಂತದ ನೌಕರರು ಬೆಳಿಗ್ಗೆ 10 ಗಂಟೆಗೆ ಕಚೇರಿಯಲ್ಲಿ ಹಾಜರಿರಬೇಕು. ಸಾರ್ವಜನಿಕ ಕೆಲಸ ವಿಳಂಬವಾದರೆ ಯಾವ ಕಾರಣಕ್ಕೂ ಸಹಿಸುವುದಿಲ್ಲವೆಂದು ಕಠಿಣ ಸಂದೇಶ ರವಾನಿಸಿದ್ದಾರೆ.

## ರಾಷ್ಟ್ರಪತಿ ಪದಕ ಪಡೆದ ಯೋಧನಿಗೆ ಭಾವುಕ ವಿದಾಯ

• ಪ್ರಜೋದಯ ವರದಿ

**ಆಲೂರು:** ಅನಾರೋಗ್ಯದಿಂದ ನಿಧನರಾದ ತಾಲ್ಲೂಕಿನ ಮಾದಿಹಳ್ಳಿ ಗ್ರಾಮದ ನಿವೃತ್ತ ಸಿಆರ್‌ಪಿಎಫ್ ಯೋಧ ರಂಗಸ್ವಾಮಿ (56) ಅವರ ಅಂತ್ಯಕ್ರಿಯೆ ಶನಿವಾರ ಮನಿಗನಹಳ್ಳಿ ಗ್ರಾಮದಲ್ಲಿ ನೆರವೇರಿತು.

ಗ್ರಾಮಸ್ಥರು, ಕುಟುಂಬಸ್ಥರು ಹಾಗು ಅಪಾರ ದೇಶ ಪ್ರೇಮಿಗಳು ವೀರ ಯೋಧನಿಗೆ ಕಣ್ಣೀರ ವಿದಾಯ ಹೇಳಿದರು.

ಭಾರತೀಯ ಸೇನೆಯಲ್ಲಿ ಸುಮಾರು 20 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ರಂಗಸ್ವಾಮಿ, ಜಮ್ಮು-ಕಾಶ್ಮೀರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಉಗ್ರರ ವಿರುದ್ಧ ನಡೆದ ಕಾಳಗದಲ್ಲಿ ಶೌರ್ಯ ಪ್ರದರ್ಶಿಸಿದ್ದರು. ಉಗ್ರರ ಗುಂಡಿನ ದಾಳಿಯಲ್ಲಿ ಒಂಬತ್ತು ಗುಂಡುಗಳು ದೇಹಕ್ಕೆ ತಗುಲಿದ್ದರೂ ಛಲ ಬಿಡದೆ ಹೋರಾಟ ಮುಂದುವರಿಸಿ ಇಬ್ಬರು ಉಗ್ರರನ್ನು ಹೊಡೆದುರುಳಿಸಿದ್ದರು.

ಈ ವೇಳೆ ಗಂಭೀರವಾಗಿ ಗಾಯಗೊಂಡ ಅವರು ಎರಡು ಕಾಲುಗಳನ್ನು ಕಳೆದು ಕೊಂಡಿದ್ದರು. ಬಳಿಕ ಕಿಡ್ನಿ ವೈಫಲ್ಯಕ್ಕೂ ಒಳಗಾದರೂ ಜೀವನೋತ್ಸಾಹ ಕಳೆದುಕೊಳ್ಳದೆ ನಿವೃತ್ತಿಯ ನಂತರ ಸುಮಾರು 23 ವರ್ಷಗಳ ಕಾಲ ಸಾರ್ಥಕ ಬದುಕು ನಡೆಸಿದರು.



ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಹಲವು ವರ್ಷ ಚಿಕಿತ್ಸೆ ಪಡೆದರೂ ಆರೋಗ್ಯ ಸುಧಾರಿಸದ ಹಿನ್ನಲೆಯಲ್ಲಿ ಸ್ವಯಂ ನಿವೃತ್ತಿ ಪಡೆದಿದ್ದರು.

ದೇಶ ಸೇವೆಯಲ್ಲಿ ತೋರಿದ ಅಪ್ರತಿಮ ಶೌರ್ಯಕ್ಕೆ ಅವರಿಗೆ ರಾಷ್ಟ್ರಪತಿ ಪೊಲೀಸ್ ಪದಕ ಪ್ರದಾನವಾಗಿದ್ದು, ಈ ಗೌರವ ಪಡೆದ ಜಿಲ್ಲೆಯ ಮೊದಲ ಯೋಧ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ನಿವೃತ್ತಿಯ ಬಳಿಕ ಕೃಷಿಯಲ್ಲಿ ಜೀವನ ಕಂಡುಕೊಂಡಿದ್ದರು.

**ಗೌರವ ಸಲ್ಲಿಸದ ಜಿಲ್ಲಾಡಳಿತ**

ರಾಷ್ಟ್ರಪತಿ ಮಟ್ಟದ ಗೌರವ ಪಡೆದಿದ್ದ ಯೋಧರ ಅಂತ್ಯಕ್ರಿಯೆ ವೇಳೆ ಜಿಲ್ಲಾ ಪೊಲೀಸ್ ಇಲಾಖೆ ಅಧಿಕೃತ ಗೌರವ ಸಲ್ಲಿಸದಿರುವುದು ಬೇಸರದ ಸಂಗತಿ ಎಂದು ನಿವೃತ್ತ ಅರೆಸೇನಾ ಸೈನಿಕರ ಸಂಘದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ದೇಶಕ್ಕಾಗಿ ಜೀವವನ್ನೇ ಪಣಕ್ಕಿಟ್ಟ ಯೋಧರಿಗೆ ಸರ್ಕಾರ ಹಾಗು ಸಂಬಂಧಿತ ಇಲಾಖೆಗಳು ಸೂಕ್ತ ಗೌರವ ಸಲ್ಲಿಸಬೇಕಿತ್ತು ಎಂದು ಅಸಮಾಧಾನ ಹೊರಹಾಕಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ದೇಶದ ರಕ್ಷಣೆಗೆ ಜೀವನವನ್ನೇ ಮುಡಿಪಾಗಿಟ್ಟ ವೀರ ಯೋಧರ ಸೇವೆ ಸದಾ ಸ್ಮರಣೀಯ. ಇಂತಹ ಮಹನೀಯರ ತ್ಯಾಗ, ಸಾಹಸ ಮತ್ತು ದೇಶಭಕ್ತಿ ಮುಂದಿನ ಪೀಳಿಗೆಗೆ ಪ್ರೇರಣೆಯಾಗಬೇಕು. ಸಮಾಜ ಇಂತಹ ವೀರರನ್ನು ಎಂದಿಗೂ ಮರೆಯಬಾರದು ಎಂದು ಹೇಳಿದರು.

## ಆಸ್ತಿ ವಿವಾದ: ಯುವಕನಿಗೆ ಮಚ್ಚಿನಿಂದ ಮಾರಣಾಂತಿಕ ಹಲ್ಲೆ

• ಪ್ರಜೋದಯ ವರದಿ



**ಆಲೂರು:** ಆಸ್ತಿ ವಿಚಾರವಾಗಿ ಸಹೋದರ ಸಂಬಂಧಿಗಳ ನಡುವೆ ಶುರುವಾದ ಜಗಳ ವಿಕೋಪಕ್ಕೆ ತಿರುಗಿ ಯುವಕನೊಬ್ಬ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿಂಗರಾಜ್ ಅವರ ಪುತ್ರ ಕಿರಣ್ ಗಂಭೀರ ಗಾಯಗೊಂಡಿದ್ದು ಹಿಮ್ಸ್‌ಗೆ ದಾಖಲಿಸಲಾಗಿದೆ. ನಿಂಗರಾಜ್ ಅವರ ಅಣ್ಣ ಯೋಗೀಶ್ ಪುತ್ರ ಸೋಮಶೇಖರ್ ಮಚ್ಚಿನಿಂದ ಹಲ್ಲೆ ನಡೆಸಿ ನಾಪತ್ತೆಯಾಗಿದ್ದಾನೆ.

ನಲ್ಲೂರಿನಲ್ಲಿರುವ 5 ಎಕರೆ ಜಮೀನು ಭಾಗ ಮಾಡಿಕೊಳ್ಳುವ ವಿಚಾರವಾಗಿ ಸಹೋದರರ ನಡುವೆ ಹಲವು ವರ್ಷಗಳಿಂದ ಗಲಾಟೆ ನಡೆಯುತ್ತಿತ್ತು. ಜಮೀನು ಹಂಚಿಕೆ ಮೊದಲೇ ಒತ್ತುವರಿ ಮಾಡಿ ಉಳುಮೆ ಮಾಡಲು ಸೋಮಶೇಖರ್ ಮುಂದಾಗಿದ್ದ. ಟ್ರ್ಯಾಕ್ಟರ್‌ನಲ್ಲಿ ಉಳುಮೆ ಮಾಡುತ್ತಿದ್ದ. ಹಂಚಿಕೆ ಪ್ರಕ್ರಿಯೆ ಮುಗಿಯದೆ ಭೂಮಿ ಉಳುಮೆ ಮಾಡುತ್ತಿದ್ದ ಚಿಕ್ಕಪ್ಪನ ಮಗ ಸೋಮಶೇಖರ್‌ನನ್ನು ಕಿರಣ್ ಪ್ರಶ್ನೆ ಮಾಡಿದ್ದಾನೆ. ಅಷ್ಟಕ್ಕೆ ಆಕ್ರೋಶಗೊಂಡ ಸೋಮಶೇಖರ್, ಟ್ರ್ಯಾಕ್ಟರ್‌ನಲ್ಲಿ ಮೊದಲೇ ಇಟ್ಟುಕೊಂಡಿದ್ದ ಮಚ್ಚಿನಿಂದ ಕಿರಣ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಕುತ್ತಿಗೆ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಕಿರಣ್‌ಗೆ ತೀವ್ರ ರಕ್ತಸ್ರಾವವಾಗಿದೆ. ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳು ಕಿರಣ್ ತಂದೆ ನಿಂಗರಾಜ್ ಅವರು ನೀಡಿದ ದೂರು ಆಧರಿಸಿ ಆಲೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಪ್ರಾಥಮಿಕ, ಪ್ರೌಢಶಾಲೆಗಳಿಗೆ 7,695 ಹುದ್ದೆ ಮಂಜೂರು: 6,453 ಮಂದಿ ಮಾತ್ರ ಕರ್ತವ್ಯ

# ಜಿಲ್ಲೆಯಲ್ಲಿ 1,242 ಸರ್ಕಾರಿ ಶಿಕ್ಷಕರ ಹುದ್ದೆ ಖಾಲಿ

- ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಶಾಲೆಗಳು ಆರಂಭಗೊಂಡು ದಾಖಲಾತಿ ಪ್ರಕ್ರಿಯೆ ಪೂರ್ಣಗೊಂಡು, ಶೈಕ್ಷಣಿಕ ಚಟುವಟಿಕೆ ಚುರುಕುಗೊಂಡಿದೆ. ಜಿಲ್ಲೆಯ ಸರ್ಕಾರಿ ಶಾಲೆಗಳ ಮಕ್ಕಳಿಗೆ ಪಾಠ ಮಾಡಲು ಶಿಕ್ಷಕರ ಕೊರತೆ ಎದುರಾಗಿದೆ.

ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಒಟ್ಟು 7,695 ಶಿಕ್ಷಕರ ಹುದ್ದೆಗಳು ಮುಂಜೂರಾಗಿವೆ. ಅದರಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವವರು 6,453 ಮಂದಿ ಮಾತ್ರ. ಬರೋಬ್ಬರಿ 1,242 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಕೊರತೆ ನಿವಾರಣೆಗೆ ಶಿಕ್ಷಣ ಇಲಾಖೆ ಒಟ್ಟು 895 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಕಾಟಾಚಾರಕ್ಕೆ ಎಂಬಂತೆ ಶಾಲೆಗಳನ್ನು ನಡೆಸಲಾಗುತ್ತಿದೆ. ಇಂಗ್ಲೀಷ್, ಗಣಿತ, ವಿಜ್ಞಾನ ಶಿಕ್ಷಕರ ಕೊರತೆ ಹೆಚ್ಚಿನದಾಗಿ ಕಂಡು ಬಂದಿದೆ.

ಹೀಗಾಗಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಬಡವರ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿರುವುದು ಮಾತ್ರವಲ್ಲದೇ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹಿಂದುಳಿ ಯುವಂತಾಗಿದೆ.



ಇದೇ ಕಾರಣಕ್ಕೆ ಪೋಷಕರು ಸಾಲ ಮಾಡಿ, ಸಾವಿರಾರು ರೂ. ಶುಲ್ಕ ಕಟ್ಟಿ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪರಿಸ್ಥಿತಿಯೂ ಹೀಗೆ ಇದೆ. ಒಟ್ಟು 1,337 ಹುದ್ದೆಗಳು ಮುಂದಾಗಿದ್ದು, ಅದರಲ್ಲಿ 919 ಶಿಕ್ಷಕರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇನ್ನೂ 418 ಹುದ್ದೆಗಳು ಖಾಲಿ ಇವೆ.

**596 ಪ್ರಾಥಮಿಕ ಶಿಕ್ಷಕರ ಕೊರತೆ**

ಜಿಲ್ಲೆಗೆ ಒಟ್ಟು 5,471 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 4,875 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದು, 596 ಹುದ್ದೆಗಳು ಖಾಲಿ ಇವೆ. ಆಲೂರು ತಾಲ್ಲೂಕಿಗೆ ಒಟ್ಟು 333 ಹುದ್ದೆಗಳು ಮಂಜೂರಾಗಿದ್ದು 282 ಹುದ್ದೆಗಳು ಭರ್ತಿಯಾಗಿ, 51 ಹುದ್ದೆಗಳು ಖಾಲಿ ಇವೆ. ಅರಕಲಗೂಡು ತಾಲ್ಲೂಕಿಗೆ 733 ಹುದ್ದೆಗಳು ಮಂಜೂರಾಗಿದ್ದು, 609 ಹುದ್ದೆಗಳು ಭರ್ತಿಯಾಗಿ, 124 ಹುದ್ದೆಗಳು ಖಾಲಿ ಇವೆ.

» ನಾಲ್ಕನೇ ಪುಟದಲ್ಲಿ

### 895 ಅತಿಥಿ ಶಿಕ್ಷಕರ ನೇಮಕ

ಶಿಕ್ಷಕರ ಕೊರತೆ ನೀಗಿಸುವ ಸಲುವಾಗಿ ಜಿಲ್ಲೆಯ ಪ್ರಾಥಮಿಕ ಶಾಲೆಗಳಿಗೆ 539 ಹಾಗು ಪ್ರೌಢಶಾಲೆಗೆ 356 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಎರಡು ವಿಭಾಗದಿಂದ ಜಿಲ್ಲೆಯಲ್ಲಿ ಒಟ್ಟು ಖಾಲಿ ಇರುವ 1,242 ಶಿಕ್ಷಕರ ಹುದ್ದೆಗಳಿಗೆ ಪ್ರಸಕ್ತ ವರ್ಷದಲ್ಲಿ ತಾತ್ಕಾಲಿಕವಾಗಿ ಒಟ್ಟು 895 ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡರೂ ಇನ್ನೂ 347 ಶಿಕ್ಷಕರ ಕೊರತೆ ಎದು ರಾಗಿದೆ. ಅದರಿಂದ ವಿದ್ಯಾರ್ಥಿಗಳ ಕಲಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಶೈಕ್ಷಣಿಕ ಪ್ರಗತಿಗೂ ಹಿನ್ನಡೆಯಾಗಲಿದೆ.

(ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳು)

| ತಾಲ್ಲೂಕು | ಪ್ರಾಥಮಿಕ | ಪ್ರೌಢಶಾಲೆ |
|---|---|---|
| ಆಲೂರು | 51 | 51 |
| ಅರಕಲಗೂಡು | 124 | 107 |
| ಅರಸೀಕೆರೆ | 69 | 95 |
| ಬೇಲೂರು | 68 | 42 |
| ಚನ್ನರಾಯಪಟ್ಟಣ | 82 | 119 |
| ಹಾಸನ | 77 | 30 |
| ಹೊಳೆನರಸೀಪುರ | 50 | 126 |
| ಸಕಲೇಶಪುರ | 95 | 76 |

## ಕೆಂಪುಹೊಳೆ ಮೀಸಲು ಅರಣ್ಯ ಒತ್ತುವರಿ ತೆರವು



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಮಾರನಹಳ್ಳಿ ಶಾಖೆಯ ಕೆಂಪುಹೊಳೆ ಮೀಸಲು ಅರಣ್ಯ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ -75ರ ಪಕ್ಕದಲ್ಲಿರುವ ಮೀಸಲು ಅರಣ್ಯ ಪ್ರದೇಶದಲ್ಲಿ ಹೋಟೆಲ್ ಮಾಲೀಕ ಮಾಡಿಕೊಂಡಿದ್ದ ಒತ್ತುವರಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ತೆರವುಗೊಳಿಸಿದ್ದಾರೆ.

ಸರ್ವೆ ನಂ.401ರಲ್ಲಿ ಹೋಟೆಲ್ ಮಾಲೀಕ ಗಿರೀಶ್ ಅವರು ಖಾಲಿ ಜಾಗಕ್ಕೆ ಅಕ್ರಮವಾಗಿ ಮಣ್ಣು ತುಂಬಿಸಿ 5 ಗುಂಟೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವುದು ಪತ್ತೆಯಾಯಿತು. ಸಕಲೇಶಪುರ ವಲಯ ಅರಣ್ಯಾಧಿಕಾರಿ ಹೇಮಾಂತ್ ಕುಮಾರ್ ಅವರ ನೇತೃತ್ವದಲ್ಲಿ ಒತ್ತುವರಿ ತೆರವುಗೊಳಿಸಿ, ಹೋಟೆಲ್ ಮಾಲೀಕನಿಗೆ ಅರಣ್ಯ ಕಾನೂನು ಹಾಗು ನಿಯಮಗಳ ಕುರಿತು ಮಾಹಿತಿ ನೀಡಿ ಮನವರಿಕೆ ಮಾಡಿಕೊಡಲಾಯಿತು.

ಬಳಿಕ ಹಸಿರು ಹಾಸನ ಅಭಿಯಾನದಡಿ ಒತ್ತುವರಿ ಮಾಡಿಕೊಂಡಿದ್ದ ಜಾಗದಲ್ಲೇ ಗಿರೀಶ್ ಅವರಿಂದ ವಿವಿಧ ಜಾತಿಯ ಸಸಿಗಳನ್ನು ನೆಡಿಸುವ ಮೂಲಕ ಅರಣ್ಯಾಭಿವೃದ್ಧಿಗೆ ಒತ್ತು ನೀಡಲಾಯಿತು.

ಈ ವೇಳೆ ಅರಣ್ಯ ಭೂಮಿ ಒತ್ತುವರಿ ಪ್ರಕರಣಗಳನ್ನು ಪತ್ತೆಹಚ್ಚಲು ಸಿಬ್ಬಂದಿ ಹೆಚ್ಚಿನ ಎಚ್ಚರಿಕೆಯಿಂದ ಗಸ್ತು ತಿರುಗುವಂತೆ ಅರಣ್ಯಾಧಿಕಾರಿಗಳು ಸೂಚನೆ ನೀಡಿದರು.

## ಸ್ಕೂಟಿಯಲ್ಲಿ ಬಂದು ಗಿಡ ಕತ್ತರಿಸಿದ ಕಿಡಿಗೇಡಿ



• ಪ್ರಜೋದಯ ವರದಿ

**ಹಾಸನ:** ನಗರದ ರಿಂಗ್ ರಸ್ತೆಯ ಸುಬೇದಾರ್ ವೃತ್ತ ಸಮೀಪ ಮಹಾನಗರ ಪಾಲಿಕೆಯಿಂದ ನೆಟ್ಟಿರುವ ಗಿಡಗಳನ್ನು ಕಿಡಿಗೇಡಿಯೊಬ್ಬ ಕತ್ತರಿಸಿರುವ ಘಟನೆ ನಡೆದಿದೆ.

ಶುಕ್ರವಾರ ರಾತ್ರಿ ಸ್ಕೂಟಿಯಲ್ಲಿ ಬಂದಿರುವ ಯುವಕ ಮಚ್ಚಿನಿಂದ ಎರಡು ಗಿಡಗಳನ್ನು ಕತ್ತರಿಸಿ ಪರಾರಿಯಾಗಿದ್ದಾನೆ. ಈ ದೃಶ್ಯಾವಳಿ ಪೊಲೀಸ್ ಇಲಾಖೆಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಜನರ ಓಡಾಟ ಇಲ್ಲದಿರುವಾಗ ಮರಗಳ ನಾಶಪಡಿ ಸುವ ಆತನ ಉದ್ದೇಶ ಏನೆಂ ಬುದು ತಿಳಿದುಬಂದಿಲ್ಲ. ಸ್ಥಳೀಯರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ರಸ್ತೆಯ ಮಧ್ಯದಲ್ಲಿ ನೆಟ್ಟಿರುವ ಗಿಡಗಳು ಹಲುಸಾಗಿ ಬೆಳೆದಿದ್ದು ನಗರ ಸೌಂದರ್ಯ ವೃದ್ಧಿಸುವ ಜೊತೆಗೆ ಪರಿಸರಕ್ಕೂ ಪೂರಕವಾಗಿವೆ. ಜಾನುವಾರುಗಳಿಂದ ರಕ್ಷಣೆಗಾಗಿ ಮಹಾನಗರ ಪಾಲಿಕೆ ಅದಕ್ಕೆ ಕಬ್ಬಿಣದ ಸರಳು ಹಾಕಿ ಹಲವು ವರ್ಷಗಳಿಂದ ಜೋಪಾನ ಮಾಡಿದೆ. ಯುವಕನ ಕಿಡಿಗೇಡಿ ಕೃತ್ಯ ಎಲ್ಲಾ ಶ್ರಮವನ್ನು ವ್ಯರ್ಥ ಮಾಡಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹಸಿರು ಹಾಸನ ಸಂಕಲ್ಪದಡಿ ವರ್ಷಪೂರ್ತಿ ಸಸಿ ನೆಟ್ಟು ಪರಿಸರ ಕಾಳಜಿ ಮೆರೆಯುತ್ತಿದ್ದರೆ ದುಷ್ಕರ್ಮಿ ಬೆಳೆದಿರುವ ಗಿಡಗಳನ್ನು ಹಾಳು ಮಾಡುತ್ತಿದ್ದಾನೆ. ಅರಸೀಕೆರೆ ರಸ್ತೆಯಲ್ಲೂ ಇದೇ ರೀತಿ ಗಿಡಗಳಿಗೆ ಹಾನಿ ಮಾಡಲಾಗಿದೆ. ಶೀಘ್ರ ಆತನನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## ನಾಯಕರ ಪರ ಜೈಕಾರ ಪ್ರಜಾಪ್ರಭುತ್ವದ ಸೌಂದರ್ಯ

• ಪ್ರಜೋದಯ ವರದಿ



**ಸಕಲೇಶಪುರ:** ನೆಚ್ಚಿನ ನಾಯಕರ ಪರವಾಗಿ ಅಭಿಮಾನಿಗಳು ಹೋರಾಡುವುದು ಪ್ರಜಾ ಪ್ರಭುತ್ವದ ಸೌಂದರ್ಯವೆಂದು ಆರೋಗ್ಯ ಸಚಿವ ಯು.ಟಿ.ಖಾದರ್ ಅವರು ಹೇಳಿದರು.

ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಸಚಿವ ಸಂಪುಟದಲ್ಲಿ ಶಾಸಕ ಜಮೀರ್ ಅಹ್ಮದ್‌ಖಾನ್ ಅವರಿಗೆ ಪ್ರಾಧಾನ್ಯತೆ ನೀಡಬೇಕೆಂದು ರಾಜ್ಯಾದ್ಯಂತ ನಡೆಯುತ್ತಿರುವ ಪ್ರತಿಭಟನೆ ಸಂಬಂಧ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ಸಚಿವ ಸ್ಥಾನಕ್ಕೆ ಸಂಬಂಧಿಸಿ ಯಾವುದೇ ಅಸಮಾಧಾನ ಇಲ್ಲ. ಅಭಿಮಾನಿಗಳು ತಮ್ಮ ನಾಯಕರಿಗೆ ಸಚಿವ ಸ್ಥಾನ ನೀಡುವಂತೆ ಬೇಡಿಕೆ ಇಡುವುದು ಸಹಜ. ಅದು ಪ್ರಜಾಪ್ರಭುತ್ವದ ಸೌಂದರ್ಯವೇ ಆಗಿದೆ. ಯಾರಿಗೆ ಯಾವ ಜವಾಬ್ದಾರಿ ನೀಡಬೇಕೆಂಬುದನ್ನು ಪಕ್ಷದ ನಾಯಕರು ಹಾಗೂ ಪಕ್ಷವೇ ತೀರ್ಮಾನಿಸುತ್ತದೆ. ಈ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲವೆಂದು ಸ್ಪಷ್ಟಪಡಿಸಿದರು.

ರಾಜ್ಯ ಸರ್ಕಾರ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಜನರ ವಿಶ್ವಾಸ ಗಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಜನಪರ ಆಡಳಿತ ನೀಡಲು ಕಾಂಗ್ರೆಸ್ ಪಕ್ಷ ಸಂಪೂರ್ಣ ಬದ್ಧವಾಗಿದೆ ಎಂದು ಹೇಳಿದರು. ಮುಂದಿನ ವಿಧಾನಸಭಾಧ್ಯಕ್ಷರು ಯಾರು ಎಂಬ ಪ್ರಶ್ನೆಗೆ ಉತ್ತರಿಸಿ, ಅದು ಸಂಪೂರ್ಣವಾಗಿ ಪಕ್ಷದ ತೀರ್ಮಾನ. ಪಕ್ಷ ಯಾವ ನಿರ್ಧಾರ ಕೈಗೊಳ್ಳುತ್ತದೆಯೋ ಅದರಂತೆ ನಡೆದುಕೊಳ್ಳಲಾಗು ತ್ತದೆಂದರು.

ಉತ್ತಮ ಸಭಾಧ್ಯಕ್ಷರು, ಸಮರ್ಥ ಸಚಿವರು ಹಾಗು ಜನಪರ ಸರ್ಕಾರವನ್ನು ನೀಡುವ ಗುರಿ ಯನ್ನು ನಾವು ಹೊಂದಿದ್ದೇವೆ. ಸರ್ಕಾರದ ಎಲ್ಲಾ ಶಾಸಕರು ಹಾಗು ಪ್ರತಿಪಕ್ಷದ ಸಹಕಾರದೊಂದಿಗೆ ಜನರು ಮೆಚ್ಚುವ ಆಡಳಿತ ನೀಡಲು ನಾವು ಬದ್ಧರಾಗಿದ್ದೇವೆಂದು ತಿಳಿಸಿದರು.

## ಸಕಲೇಶಪುರದಲ್ಲಿ ಮಧ್ಯರಾತ್ರಿ ಆರೋಗ್ಯ ಸಚಿವರ ಸಭೆ | ಅಧಿಕಾರಿಗಳ ಕಾರ್ಯವೈಖರಿಗೆ ಬೇಸರ

# ಶೀಘ್ರ ಹೊರಗುತ್ತಿಗೆ ವೈದ್ಯರ ಖಾಯಂ




ಆಸ್ಪತ್ರೆ ಎಂದರೆ ಭಯದ ವಾತಾವರಣ ಸೃಷ್ಟಿಯಾಗದೆ ಕುಟುಂಬ ಎಂಬ ಭಾವನೆ ಬರಬೇಕು. ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸುವುದು ವೈದ್ಯರು ಹಾಗು ಸಿಬ್ಬಂದಿ ಕರ್ತವ್ಯ. ರೋಗಿಗಳು ಬಂದ ವೇಳೆ ಅವರಿಗೆ ಮಾನವೀಯತೆಯಿಂದ ಚಿಕಿತ್ಸೆ ನೀಡಬೇಕು. ರಾಜ್ಯಾದ್ಯಂತ ಆಸ್ಪತ್ರೆಯಲ್ಲಿನ ಕುಂದು ಕೊರತೆ ಆಲಿಸಲು ಸಹಾಯವಾಣಿ ಆರಂಭಿಸಲಾಗುವುದು.

-ಯು.ಟಿ.ಖಾದರ್, ಆರೋಗ್ಯ ಸಚಿವ

• ಪ್ರಜೋದಯ ವರದಿ

**ಸಕಲೇಶಪುರ:** ಐದು ವರ್ಷ ಸೇವೆ ಪೂರ್ಣಗೊಳಿಸಿದ ಹೊರ ಹೊತ್ತಿಗೆ ವೈದ್ಯರನ್ನು ಶೀಘ್ರ ಖಾಯಂ ಮಾಡಿಕೊಳ್ಳುವುದಾಗಿ ನೂತನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಅವರು ಹೇಳಿದರು.

ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಯಲ್ಲಿ ಶುಕ್ರವಾರ ರಾತ್ರಿ 11 ರಿಂದ 2 ಗಂಟೆ ವರೆಗೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಆರಂಭಿಕವಾಗಿ 200 ವೈದ್ಯರ ನೇಮಕಕ್ಕೆ ಕ್ರಮ ವಹಿಸಲಾಗಿದೆ ಎಂದರು.

ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆ ಆರಂಭವಾಗಿ ನೂರು ವರ್ಷ ಕಳೆದಿದೆ. ಕೆಲವು ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ಹಂತ ಹಂತವಾಗಿ ಸಮಸ್ಯೆ ಬಗೆಹರಿಸಲಾಗುವುದು. ಪ್ರತಿ ತಿಂಗಳು ನೂರಕ್ಕೂ ಹೆಚ್ಚು ಹೆರಿಗೆಯಾಗುತ್ತಿದ್ದರೆ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಪ್ರತ್ಯೇಕ ಮಾಡುವ ಯೋಜನೆಯನ್ನು ರೂಪಿಸುವುದಾಗಿ ಭರವಸೆ ನೀಡಿದರು.

ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರವಿದ್ದು ಸಿಬ್ಬಂದಿ ಇಲ್ಲ. ಸ್ಕ್ಯಾನಿಂಗ್‌ಗೆ ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸುತ್ತಿರುವುದು ಕಂಡುಬಂದಿದ್ದು ಇನ್ನು ಮುಂದೆ ಇಂತಹ ಪ್ರಮಾದ ಗಳಿಗೆ ಆಸ್ಪದ ಮಾಡಿ ಕೊಡಬೇಡಿ ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಲೆನಾಡು ಭಾಗದಲ್ಲಿ ಕಾಡು ಪ್ರಾಣಿಗಳು ಮತ್ತು ವಿಷ ಜಂತುಗಳ ಕಡಿತ ಹೆಚ್ಚಾಗಿ ಕಂಡು ಬರುತ್ತದೆ.

» ನಾಲ್ಕನೇ ಪುಟದಲ್ಲಿ

### ಹೆಚ್ಚುವರಿ ವೇತನಕ್ಕಾಗಿ ಸ್ಟಾಫ್ ನರ್ಸ್ ಕಣ್ಣೀರು

ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಹೆಚ್‌ಎಂ) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾಫ್ ನರ್ಸ್‌ಗಳು ವೇತನ ಹೆಚ್ಚಳ ಮತ್ತು ಉದ್ಯೋಗ ಭದ್ರತೆಗೆ ಆಗ್ರಹಿಸಿ ಸಚಿವರ ಎದುರು ಕಣ್ಣೀರು ಹಾಕಿದರು.

ಕಳೆದ 16 ವರ್ಷಗಳಿಂದ ಕೇವಲ 17 ಸಾವಿರ ರೂ. ಸಂಬಳಕ್ಕೆ ಕೆಲಸ ಮಾಡುತ್ತಿದ್ದೇವೆ. ವಯ ಸ್ಸಾಗುತ್ತಿದೆ, ಮಕ್ಕಳು ದೊಡ್ಡವರಾಗುತ್ತಿದ್ದಾರೆ. ಅವರ ಶಿಕ್ಷಣ ಮತ್ತು ಕುಟುಂಬ ನಿರ್ವಹಣೆ ಕಷ್ಟ ವಾಗುತ್ತಿದೆ. ಎಲ್ಲಾ ರೀತಿಯ ಸೇವೆಗಳನ್ನು ನೀಡುತ್ತಿದ್ದರೂ ಜೀವನ ಸಾಗಿಸುವುದೇ ಕಷ್ಟವಾಗಿದೆ. ಈಗ ವಯಸ್ಸಾಗಿರುವುದರಿಂದ ಬೇರೆ ಉದ್ಯೋಗವೂ ಸಿಗುವುದಿಲ್ಲವೆಂದು ಅಳಲು ತೋಡಿಕೊಂಡರು.

ಅದಕ್ಕೆ ಪ್ರತಿಕ್ರಿಯಿಸಿದ ಸಚಿವ ಯು.ಟಿ.ಖಾದರ್ ಅವರು, ನಿಮ್ಮ ನೋವು ಮತ್ತು ಸಂಕಷ್ಟ ನನಗೆ ಅರ್ಥವಾಗುತ್ತದೆ. ಆದರೆ ಎನ್‌ಹೆಚ್‌ಎಂ ಸಿಬ್ಬಂದಿಯನ್ನು ಖಾಯಂ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಸಂಬಳ ಹೆಚ್ಚಳದ ಕುರಿತು ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಲಾಗುವುದು. ಎನ್‌ಹೆಚ್‌ಎಂ ಯೋಜನೆಯೇ ನಿಂತುಹೋದರೆ ಉದ್ಯೋಗದ ಅವಕಾಶವೂ ಇರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂದು ಹೇಳಿದರು.

ಈ ವೇಳೆ ನರ್ಸ್‌ಗಳು, ನಮ್ಮ ಸಹೋದ್ಯೋಗಿಗಳಲ್ಲಿ ಹಲವರು ವಿದೇಶಗಳಲ್ಲಿ ಉತ್ತಮ ಸಂಬಳ ಪಡೆಯುತ್ತಿದ್ದಾರೆ. ನಾವು ನಮ್ಮ ಊರಲ್ಲೇ ಸೇವೆ ಸಲ್ಲಿಸಿದರೆ ಒಂದಲ್ಲ ಒಂದು ದಿನ ಸರ್ಕಾರ ನಮ್ಮ



ಪರಿಸ್ಥಿತಿಯನ್ನು ಪರಿಗಣಿಸಿ ವೇತನ ಹೆಚ್ಚಿಸಬಹುದೆಂಬ ನಿರೀಕ್ಷೆಯಲ್ಲಿ ಕೆಲಸ ಮಾಡುತ್ತಿದ್ದೆವೆಂದು ವೃತ್ತಿ ಗೌರವ ಮೆರೆದರು.


ಅದಕ್ಕೆ ಉತ್ತರಿಸಿದ ಸಚಿವರು, ನನಗೂ ಇಂತಹ ಅವಕಾಶಗಳು ಬಂದಿದ್ದವು. ನನ್ನ ಸ್ನೇಹಿತರು ಅಮೇರಿಕಾದಲ್ಲಿದ್ದಾರೆ. ನಾನು ಕೂಡ ಹೋಗಬಹುದಿತ್ತು. ಸಾರ್ವಜನಿಕ ಜೀವನವನ್ನು ಆಯ್ಕೆ ಮಾಡಿಕೊಂಡು ಜನಪ್ರತಿನಿಧಿಯಾಗಿದ್ದೇನೆ. ನಿಮ್ಮ ಸಮಸ್ಯೆ ಅರ್ಥ ಮಾಡಿಕೊಂಡಿದ್ದೇನೆಂದರು. ಕೆಲವರು ಉದ್ಯೋಗವನ್ನು ಶಾಶ್ವತಗೊಳಿಸುವ ಭರವಸೆ ನೀಡಿ ಸಿಬ್ಬಂದಿಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಪ್ರತಿಭಟನೆ ನಡೆಸಿ ಹಣ ವಸೂಲಿ ಮಾಡುವ ಸಾಧ್ಯತೆಗಳ ಬಗ್ಗೆ ಎಚ್ಚರಿಕೆ ನೀಡಿದ ಸಚಿವರು, ಯಾರಿಗೂ ನಯಾಪೈಸೆ ಕೊಡಬೇಡಿ. ಅಂತಹ ಭರವಸೆಗಳಿಗೆ ಮರುಳಾಗ ಬೇಡಿ ಎಂದು ಸಲಹೆ ನೀಡಿದಾಗ ಆ ವಿಚಾರವಾಗಿ ಈಗಾಗಲೇ ಮೋಸ ಹೋಗಿದ್ದೇವೆಂದು ಸಿಬ್ಬಂದಿ ಹೇಳಿದರು.

## ಕಾಡಾನೆ ದಾಳಿಗೆ ಶುಂಠಿ, ರಾಗಿ ಬೆಳೆ ನಾಶ: ರೈತ ಕಂಗಾಲು

• ಪ್ರಜೋದಯ ವರದಿ

**ಅರಕಲಗೂಡು:** ಕಾಡಾನೆಗಳ ದಿಢೀರ್ ದಾಳಿಯಿಂದ ಶುಂಠಿ, ರಾಗಿ ಸೇರಿ ವಿವಿಧ ಬೆಳೆಗಳು ನಾಶವಾಗಿರುವ ಘಟನೆ ಮಲ್ಲಿಪಟ್ಟಣ ಹೋಬಳಿಯ ಕಾಡಂಚಿನ ಅಬ್ಬೂರು ಹಾಗು ಪಾರಸನಹಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಬೆಳೆ ಹಾನಿಯಾಗಿರುವ ಅಬ್ಬೂರು ಗ್ರಾಮಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು. ರೈತರು ಕಷ್ಟಪಟ್ಟು ಬೆಳೆದ ಬೆಳೆಗಳು ಕಾಡಾನೆಗಳ ದಾಳಿಗೆ ತುತ್ತಾಗುತ್ತಿರುವುದು ತಲೆನೋವಾಗಿದೆ. ಕಳೆದ ಕೆಲ ತಿಂಗಳಿನಿಂದ ಕಾಡಿನಿಂದ ನಾಡಿನತ್ತ ಬರುತ್ತಿರುವ ಕಾಡಾನೆಗಳ ಹಿಂಡು ರಾತ್ರಿ ವೇಳೆ ಕೃಷಿ ಜಮೀನುಗಳಿಗೆ ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿ ಉಂಟುಮಾಡುತ್ತಿದೆ. ಅಬ್ಬೂರು ಮತ್ತು ಪಾರಸನಹಳ್ಳಿ ಗ್ರಾಮದ ಹಲವು ರೈತರ ಜಮೀನುಗಳಿಗೆ ನುಗ್ಗಿದ ಕಾಡಾನೆಗಳು ಶುಂಠಿ ತೋಟಗಳನ್ನು ತುಳಿದು ನಾಶಪಡಿಸಿದ್ದು, ರಾಗಿ ಬೆಳೆಗೂ ಹಾನಿ ಉಂಟು ಮಾಡಿವೆ. ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿರುವುದಾಗಿ ರೈತರು ಅಳಲು ತೋಡಿಕೊಂಡಿದ್ದಾರೆ.



ಶುಂಠಿ ಬೆಳೆಗೆ ರೈತರು ಹೆಚ್ಚಿನ ವೆಚ್ಚ ಮಾಡಿ ಬೆಳೆ ಬೆಳೆದಿದ್ದರೂ, ಕಟಾವಿಗೆ ಬಂದ ಹಂತದಲ್ಲಿ ಕಾಡಾನೆಗಳ ದಾಳಿಯಿಂದ ಬೆಳೆ ಹಾನಿಗೊಳಗಾಗಿರುವುದು ರೈತರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ. ಮಳೆಗಾಲದ ಆರಂಭದಲ್ಲೇ ಇಂತಹ ಘಟನೆಗಳು ಮರುಕಳುಹಿಸುತ್ತಿರುವುದರಿಂದ ರೈತರು ರಾತ್ರಿ ನಿದ್ರೆ ಬಿಟ್ಟು ಜಮೀನುಗಳ ಕಾವಲು ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಬೆಳೆ ಹಾನಿಯನ್ನು ಪರಿಶೀಲಿಸಿ ಸೂಕ್ತ ಪರಿಹಾರ ಒದಗಿಸಬೇಕು. ಕಾಡಾನೆಗಳ ಸ್ಥಳಾಂತರಿಸಬೇಕೆಂದು ರೈತರು ಒತ್ತಾಯಿಸಿದ್ದಾರೆ.

ಕಾಡಂಚಿನ ಗ್ರಾಮಗಳಲ್ಲಿ ಆನೆಗಳ ನಿರಂತರ ಹಾವಳಿಯಿಂದ ಜನರು ಭಯಭೀತರಾಗಿದ್ದು, ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟಲು ಸರ್ಕಾರ ಹಾಗು ಅರಣ್ಯ ಇಲಾಖೆ ತುರ್ತು ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಕೇಳಿಬಂದಿದೆ.

C M Y K  C M Y K  C M Y K  C M Y K

# ಕಾಡಿನ ನಡುವೆ ಕಟ್ಟಿಕೊಂಡ ಬದುಕು

**“ ಹಸಿರನ್ನೇ ಒಡಲಲ್ಲಿ ತುಂಬಿಕೊಂಡಿರುವ ಕುಚ್ಚೂರು, ಸಂಜೆ ಹೊತ್ತಿನ ಕೆಂಬಣ್ಣದ ಲೋಕದಲ್ಲಿ, ಬೇರೊಂದೇ ವರ್ಣಛಾಯೆಯಲ್ಲಿ ಮಿಂದೇಳುತ್ತದೆ; ಮನದಲ್ಲಿ ಕಾವ್ಯಾನುಭವವನ್ನೇ ಮೂಡಿಸುತ್ತದೆ. ಕೊನೆಯಲ್ಲಿ ಸೂರ್ಯ ಮರೆಯಾದಾಗ, ಆ ಸುತ್ತಲಿನ ಹಸಿರು ಲೋಕವು ಕತ್ತಲಿನಲ್ಲಿ ನಿಧಾನ ಅದೃಶ್ಯವಾಗುವಾಗ, ನೋಡುವವರ ಮನಸ್ಸಿನಲ್ಲಿ ಒಂದು ರೀತಿಯ ವಿಷಾದ ತುಂಬಿದ ಅನುಭವ, ಆ ವಿಷಾದದಲ್ಲೂ ಸೂರ್ಯಾಸ್ತದ ಅದ್ಭುತ ನೋಟ ಕಣ್ತುಂಬಿಕೊಂಡ ತೃಪ್ತಭಾವ.**



ನಮ್ಮ ರಾಜ್ಯದ ಮಲೆನಾಡು ಮತ್ತು ಕರಾವಳಿಗೆ ತಾಗಿಕೊಂಡ ಬೆಟ್ಟಗುಡ್ಡಗಳಲ್ಲಿ, ಪುರಾತನ ಕಾಲದಿಂದಲೂ ನಾಗರಿಕತೆ ಅರಳಿದೆ; ದಟ್ಟಕಾಡಿನ ನಡುವೆ, ಕಡಿದಾದ ಪರ್ವತಗಳ ಮಗ್ಗುಲಿನಲ್ಲಿ, ಕೃಷಿ ಮಾಡುತ್ತಾ, ತಮ್ಮದೇ ಸಂಸ್ಕೃತಿಯನ್ನು ಕಟ್ಟಿಕೊಂಡ ಹಲವು ಪ್ರದೇಶಗಳಿವೆ. ಅಂತಹ ಒಂದು ಆಪ್ತ ಎನಿಸುವ ಊರು ಎಂದರೆ, ಕಬ್ಬಿನಾಲೆ ಎಂಬ ಗ್ರಾಮದ ತುತ್ತತುದಿಯಲ್ಲಿರುವ ಕುಚ್ಚೂರು. ಈಗ ಅಲ್ಲಿ ಬಿರುಸಾದ ಮಳೆಗಾಲವಾಗಿದೆ; ಮಳೆ ಸುರಿವಾಗ ಅಂತಹ ಜಾಗಗಳ ನೆನಪುಗಳು ಇನ್ನಷ್ಟು ಕಾಡುತ್ತವೆ.

ನಾನು ಕುಚ್ಚೂರಿಗೆ ಮೊದಲ ಬಾರಿ ಹೋಗಿದ್ದು, ನಾಲ್ಕನೆಯ ತರಗತಿಯಲ್ಲಿದ್ದಾಗ. ನನ್ನನ್ನು ಕರೆದೊಯ್ದವರು ನಮ್ಮ ಅಮ್ಮಮ್ಮ. ಕರ್ನಾಟಕದ ಅತಿ ಸುಂದರ ಗ್ರಾಮಗಳಲ್ಲಿ ಒಂದು ಎನ್ನಬಹುದಾದ ಕಬ್ಬಿನಾಲೆಯ ತುತ್ತ ತುದಿಯಲ್ಲಿರುವ ಕುಚ್ಚೂರು ಪ್ರದೇಶಕ್ಕೆ ಅಂದು ಹೋಗುವುದೆಂದರೆ ಒಂದು ಸಾಹಸ. ಸುತ್ತಲೂ ಕಾಡು, ಅಲ್ಲಲ್ಲಿ ಅಡಿಕೆ ತೋಟ; ಸಮುದ್ರ ಮಟ್ಟದಿಂದ ಸುಮಾರು 2000 ಅಡಿ ಎತ್ತರದ ಕುಚ್ಚೂರು, ಪ್ರಕೃತಿ ಮಾತೆಯ ಪುಟ್ಟ ಕೂಸು ಎನ್ನಬಹುದಾದ ಸುಂದರ ತಾಣ. ಅಲ್ಲಿ ನಮ್ಮ ಬಂಧುಗಳ ಮನೆಯಿದೆ.

ಕುಚ್ಚೂರಿನ ಆ ಮನೆಯ ಎದುರಿನಲ್ಲೇ ಒಂದು ಗದ್ದೆಯಿದೆ. ಗದ್ದೆಯ ತುದಿಯಲ್ಲಿ ನಿಂತರೆ, ಕೆಳಗೆ ಪ್ರಪಾತ, ಅದರಾಚೆ ದಟ್ಟ ಕಾಡು ತುಂಬಿದ ಕಣಿವೆ; ಎಡಭಾಗದಲ್ಲಿ ಮೇಲೇರಿ ನಿಂತ ಸುಳಿಗಲ್ ಬರೆ ಎಂಬ ಮಲೆ. ಪ್ರಪಾತದ ಕೆಳಭಾಗದಲ್ಲಿ ಪುಟ್ಟ ನದಿಯ ನೀರಿನ ಮೊರೆತ ಸಣ್ಣಗೆ ಕೇಳುತ್ತದೆ; ಗದ್ದೆಯ ತುದಿಯಲ್ಲಿ ನಿಂತು ಸೂರ್ಯಾಸ್ತ ನೋಡುವ ಅನುಭವವೇ ಒಂದು ದೃಶ್ಯಕಾವ್ಯ. ಸುತ್ತಲೂ ಹರಡಿರುವ ಹಸಿರು ತುಂಬಿದ ಪರ್ವತಗಳು ಕಣಿವೆಗಳು, ಅಡಿಕೆ ತೋಟಗಳು; ಅವುಗಳ ನಡುವಿನಿಂದ ಕಾಣುವ ಸೂರ್ಯಾಸ್ತದ ಸೊಬಗನ್ನು ಅಕ್ಷರಗಳಲ್ಲಿ ಬಣ್ಣಿಸುವುದು ಅಸಾಧ್ಯ; ಕೆಂಬಣ್ಣದ ಸೂರ್ಯನು ದೂರದ ಸಮುದ್ರದಲ್ಲಿ ಮುಳುಗುವಾಗ, ಇಡೀ ಜಗತ್ತನ್ನೇ ಕೆಂಬಣ್ಣದಲ್ಲಿ ಮುಳುಗಿಸಿ ಬಿಡುತ್ತಾನೆ.

ಹಸಿರನ್ನೇ ಒಡಲಲ್ಲಿ ತುಂಬಿಕೊಂಡಿರುವ ಕುಚ್ಚೂರು, ಸಂಜೆ ಹೊತ್ತಿನ ಕೆಂಬಣ್ಣದ ಲೋಕದಲ್ಲಿ, ಬೇರೊಂದೇ ವರ್ಣಛಾಯೆಯಲ್ಲಿ ಮಿಂದೇಳುತ್ತದೆ; ಮನದಲ್ಲಿ ಕಾವ್ಯಾನುಭವವನ್ನೇ ಮೂಡಿಸುತ್ತದೆ. ಕೊನೆಯಲ್ಲಿ ಸೂರ್ಯ ಮರೆಯಾದಾಗ, ಆ ಸುತ್ತಲಿನ ಹಸಿರು ಲೋಕವು ಕತ್ತಲಿನಲ್ಲಿ ನಿಧಾನ ಅದೃಶ್ಯವಾಗುವಾಗ, ನೋಡುವವರ ಮನಸ್ಸಿನಲ್ಲಿ ಒಂದು ರೀತಿಯ ವಿಷಾದ ತುಂಬಿದ ಅನುಭವ, ಆ ವಿಷಾದದಲ್ಲೂ ಸೂರ್ಯಾಸ್ತದ ಅದ್ಭುತ ನೋಟ ಕಣ್ತುಂಬಿಕೊಂಡ ತೃಪ್ತಭಾವ.

ಕುಚ್ಚೂರು ಮನೆಗೆ ನಾನು ಹಲವು ಬಾರಿ ಹೋಗಿದ್ದರೂ, ನಾಲ್ಕನೆಯ ತರಗತಿಯಲ್ಲಿದ್ದಾಗ ಕಂಡ ದೃಶ್ಯ ನಿಜಕ್ಕೂ ವಿಶೇಷ. ಹಲವು ಕೊಠಡಿಗಳಿದ್ದ ಕುಚ್ಚೂರು ಮನೆಯಲ್ಲಿ 1970ರ ದಶಕದ ತನಕ 100 ರಿಂದ 150 ಜನ ವಾಸಿಸುತ್ತಿದ್ದರು! ಅಲ್ಲೊಂದು ಅವಿಭಕ್ತ ಕುಟುಂಬ ಹಲವು ತಲೆಮಾರುಗಳಿಂದ ಬದುಕನ್ನು ಕಟ್ಟಿಕೊಂಡಿತ್ತು.

ಮನೆಯಲ್ಲಿದ್ದ ಮಕ್ಕಳ ಸಂಖ್ಯೆಯೇ ಸುಮಾರು 30. ಕುಚ್ಚೂರು ಮನೆಯವರ ಒಡೆತನದ ಜಾಗದಲ್ಲೇ, ಮನೆಯಿಂದ ಅನತಿ ದೂರದಲ್ಲಿ, ಶಾಲಾ ಕಟ್ಟಡವಿತ್ತು. ಆ ಮನೆಯವರಿಗಾಗಿಯೇ ಆ ಶಾಲೆಯನ್ನು ತೆರೆದಿದ್ದಾರೆ ಅನಿಸುವ ಸನ್ನಿವೇಶ. ಏಕೆಂದರೆ, ಆ ಶಾಲೆಯ ಉಪಾಧ್ಯಾಯರಿಗೆಂದೇ, ಕುಚ್ಚೂರು ಮನೆಯಲ್ಲಿ ಒಂದು ಕೊಠಡಿ ಮೀಸಲಾಗಿತ್ತು.

ಅದೊಂದು ಏಕೋಪಾಧ್ಯಾಯ, ಸರಕಾರಿ ಶಾಲೆ; ಶಾಲೆಯ ಮೇಷ್ಟ್ರು ಮನೆಯ ಸದಸ್ಯರಾಗಿಯೂ ಪರಿವರ್ತನೆಯಾಗಬೇಕಾದ ಅನಿವಾರ್ಯ ಸನ್ನಿವೇಶ ಅದು! ಆ ಉಪಾಧ್ಯಾಯರಿಗೆ ಊಟ, ತಿಂಡಿ ಎಲ್ಲವೂ ಅದೇ ಮನೆಯಲ್ಲಿ!

ಏಕೆಂದರೆ, ಆ ದಿನಗಳಲ್ಲಿ ಹೆಬ್ರಿಯಿಂದ 8 ಕಿ.ಮೀ. ನಡೆದುಕೊಂಡೇ ಬರಬೇಕಾಗಿದ್ದ ಊರು ಕುಚ್ಚೂರು. ಕಾಡಿನ ನಡುವೆ ಸಾಗುವ, ಮರಕಡಿದು ಸಾಗಿಸಲು ಮಾಡಿದ್ದ ಕಚ್ಚಾ ರಸ್ತೆಯಲ್ಲಿ ನಡಿಗೆ. ಆ ಮಹಾ ಕುಟುಂಬದಲ್ಲಿ ನಡೆದ ಒಂದು ಮದುವೆಗೆ, ನಮ್ಮ ಅಮ್ಮಮ್ಮ ನನ್ನನ್ನು ಕರೆದುಕೊಂಡು ಹೊರಟಿದ್ದರು.

ಹೆಬ್ರಿ ಸನಿಹದ ಬಚ್ಚಪ್ಪು ಎಂಬ ಕುಗ್ರಾಮದಲ್ಲಿ ಬಸ್ ಇಳಿದು, ಕಾಡಿನ ನಡುವೆ ರಸ್ತೆಯಲ್ಲಿ ನಡೆಯತೊಡಗಿದೆವು. ಎದುರಿಗೆ ಸಿಕ್ಕವರೆಲ್ಲರೂ, ಪರಿಚಯ ಇರಲಿ ಬಿಡಲಿ, ದೂರ ಹೊರಟದ್ದು? ಎಂದು ನಸುನಗುತ್ತಾ ವಿಚಾರಿಸುತ್ತಿದ್ದರು. ನಾವು ಕುಚ್ಚೂರು ಮನೆಗೆ ಹೊರಟದ್ದು ಎಂದು ಗೊತ್ತಾದಾಕ್ಷಣ, ಯಾರ ಕಡೆಯ ಬಂಧುಗಳು ಎಂದು ಗುರುತಿಸಿ, ಮಾತನಾಡಿಸಿ ಮುಂದೆ ಹೋಗುತ್ತಿದ್ದರು.

ಎಲ್ಲರಿಗೂ ಎಲ್ಲರೂ ಪರಿಚಯವಿರುವ ಗ್ರಾಮೀಣ ಪ್ರದೇಶ ಕುಚ್ಚೂರು. ನಡುದಾರಿಯಲ್ಲಿ ನನಗೆ ಸುಸ್ತು; ಅಲ್ಲೊಂದು ಪುಟ್ಟ ಹೊಟೇಲ್. ಅಲ್ಲಿ ಕಾರದ ಕಡ್ಡಿ ಕೊಡಿಸಿ, ಪುಸಲಾಯಿಸಿ, ಇನ್ನಷ್ಟು ದೂರ ನನ್ನನ್ನು ನಡೆಸಿಕೊಂಡೇ ಹೊರಟರು ನಮ್ಮ ಅಮ್ಮಮ್ಮ. ಆ ಹೊಟೇಲ್‌ನಲ್ಲಿ ಪುಟ್ಟದೊಂದು ಪಂಜರ; ಅಲ್ಲೊಂದು ಗಿಣಿ ಸಾಕಿದ್ದರು! ಅದು ಚಿಲಿಪಿಲಿ ಎನ್ನುತ್ತಿತ್ತು!

ದಟ್ಟವಾಗಿ ಬೆಳೆದಿದ್ದ ಮರಗಳ ನೆರಳಿನಲ್ಲಿ ಸಾಗಿತ್ತು ನಮ್ಮ ನಡಿಗೆ. ಆ ಆರೆಂಟು ಕಿ.ಮೀ. ದೂರದ ದಾರಿಯುದ್ದಕ್ಕೂ ಅಲ್ಲಲ್ಲಿ ಸಾಕಷ್ಟು ಮನೆಗಳಿದ್ದವು; ಪ್ರತಿ ಮನೆಗೆ ಒಂದೊಂದು ಹೆಸರು- ಪೆರ್ಲ, ಗುಬ್ಬಿಮಾರು, ಕೊಂಕಣರ ಬೆಟ್ಟು, ಬಾಯರಬೆಟ್ಟು, ಜಾರನ ಬೆಟ್ಟು, ಸಂಪಿಗೆ, ಖಜನೆ, ಕೊರ್ತಬೈಲು, ಕೆಪ್ಪನಮಕ್ಕಿ, ಕೆಳಮಠ, ಕಾಜಗಲ್ಲು- ಪ್ರತಿ ಮನೆಗೆ ಒಂದು ಹೆಸರಿತ್ತು ಎಂಬಷ್ಟು ಸ್ಥಳನಾಮ ವೈವಿಧ್ಯ!

ನಮ್ಮ ದಾರಿಗಡ್ಡಲಾಗಿ ಒಂದು ಹೊಳೆ ಬಂತು; ಕಲ್ಲುಗಳ ನಡುವೆ ರಭಸದಿಂದ ಹರಿವ ನೊರೆಯುಕ್ಕುವ ನೀರು. ಹೊಳೆಯನ್ನು ದಾಟಲು, ಸುಮಾರು 80 ಅಡಿ ಉದ್ದದ ಸೇತುವೆ; ವಿಶೇಷವೆಂದರೆ ಅದು ಬೆತ್ತ ಮತ್ತು ಬಿಳಲುಗಳಿಂದ ತಯಾರಿಸಿದ ಸೇತುವೆ! ಅದರ ಮೇಲೆ ನಡೆಯುತ್ತಾ ಹೋದರೆ, ಮಧ್ಯ ಭಾಗಕ್ಕೆ ಬಂದಾಗ ಇಡೀ ಸೇತುವೆ ಜೋಲಾಡುತ್ತದೆ.

ಮೇಘಾಲಯದಲ್ಲಿ ಅಲ್ಲೆಲ್ಲೋ ಕೆಲವು ಕಡೆ, ತೂಗಾಡುವ ಬೀಳಲು ಸೇತುವೆಗಳು ಇನ್ನೂ ಇವೆಯಂತೆ. ಅಂಥದ್ದೇ ಬಿಳಲು ಸೇತುವೆಯನ್ನು ದಾಟುವಾಗ, ಅಮ್ಮಮ್ಮ ನನ್ನ ಕೈ ಹಿಡಿದಿದ್ದರೂ, ನಡುಮಧ್ಯ ಭಾಗಕ್ಕೆ ಬಂದಾಗ, ಆ ಬಿಳಲಿನ ಸೇತುವೆ ಓಲಾಟಕ್ಕೆ ನನಗೆ ಭಯವಾಯಿತು! ಕೆಳಗೆ ರಭಸವಾಗಿ ಹರಿಯುವ ನೀರು ಬೇರೆ!

ಬಂಧುಗಳ ಮದುವೆಗೆಂದು ಹೋಗಿದ್ದ ನಾವು, ಮೂರು ದಿನ ಅಲ್ಲೇ ಠಿಕಾಣಿ ಹೂಡಿ, ಮಲೆನಾಡಿನ ಬದುಕಿನ ಒಂದು ಝಲಕನ್ನು ಅನುಭವಿಸಿದೆವು. ಜಿಗಣೆ, ಇಂಬಳ, ಉಂಬುಳು ಎಂದೆಲ್ಲಾ ಕರೆಸಿಕೊಳ್ಳುವ, ಲೋಳೆ ದೇಹದ, ಕಪ್ಪನೆಯ ಪುಟ್ಟ ಜೀವಿಯನ್ನು ನಾನು ಮೊದಲು ನೋಡಿದ್ದು ಇಲ್ಲೇ!

ಕುಚ್ಚೂರು ಮನೆಯ ಎದುರಿನಲ್ಲೇ, ತಗ್ಗಿನ ಜಾಗದಲ್ಲಿ ಅಡಕೆ ತೋಟವಿದೆ; ಅಲ್ಲೊಂದು ಪುಟ್ಟ ತೋಡು - ಆ ತೋಡಿನಲ್ಲಿ ಜುಳು ಜುಳು ಹರಿವ ನೀರು; ಅಲ್ಲೆಲ್ಲಾ ಏಲಕ್ಕಿ ಗಿಡಗಳಿದ್ದವು. ಜತೆಗೆ, ಆ ತಂಪು ಜಾಗದಲ್ಲಿ ಸುರುಳಿ ಹೂವಿನ ಗಿಡಗಳಿದ್ದವು. ತೀಕ್ಷ್ಣ ಸುಗಂಧದ ಬಿಳಿ ಬಣ್ಣದ ಸುರುಳಿ ಹೂವನ್ನು ಕೊಯ್ಯಲೆಂದು, ಆ ಮನೆಯ ಮಕ್ಕಳ ಜತೆ ನಾನೂ ಹೊರಟೆ. ಸದಾ ತೇವ ಇರುವ ತೋಡಿನ ಬಳಿ ಇಂಬಳ ನನಗೆ ಕಚ್ಚಿತು!

ಅಯ್ಯೋ ಉಂಬುಳ ಕಿತ್ತು ಬಿಸಾಕೂ ಎಂದು ಆ ಮನೆಯ ಹುಡುಗನೊಬ್ಬ ಹೇಳಿದ; ಬೆರಳಿನಲ್ಲಿ ಹಿಡಿದರೆ ಜಾರಿ ಹೋಗುವ ಇಂಬಳವನ್ನು ಕೀಳಲು, ನನ್ನಿಂದ ಹೇಗೆ ತಾನೆ ಸಾಧ್ಯ? ಪ್ರತಿ ದಿನ ಎಂಬಂತೆ ಇಂಬಳವನ್ನು ನೋಡಿದ್ದ, ಅದರೊಂದಿಗೆ ಸಹಬಾಳ್ವೆ ನಡೆಸುತ್ತಿದ್ದ ಆ ಮನೆಯ ಹುಡುಗನೇ ಇಂಬಳವನ್ನು ನಾಜೂಕಿನಿಂದ ಕಿತ್ತೆಸೆದ. ದೂರಕ್ಕೆ ಹಾರಿ ಬಿದ್ದ ಆ ಇಂಬಳವನ್ನು ಕಂಡು, ಜತೆಗೆ ನನ್ನ ಪೇಚಾಟವನ್ನು ಕಂಡು, ಎಲ್ಲಾ ಮಕ್ಕಳೂ ನಕ್ಕದ್ದೇ ನಕ್ಕದ್ದು. ಸಣ್ಣ ಸಣ್ಣ ವಿಷಯಕ್ಕೂ ನಕ್ಕು, ಸಂತಸದಿಂದಿರುತ್ತಿದ್ದರು, ಕುಚ್ಚೂರು ಮನೆಯ ಮಕ್ಕಳು!

100ರಿಂದ 150 ಜನ ವಾಸವಿದ್ದ ಆ ಮನೆಯ ದಿನಚರಿ ಹೇಗಿತ್ತು? ಅದೊಂದು ಪ್ರತ್ಯೇಕ ಗ್ರಾಮವಿದ್ದಂತೆ. ಬೆಳಗಿನ ತಿಂಡಿ ದೋಸೆ ಎಂದಾದರೆ, ಸೌದೆ ಒಲೆಯ ಮುಂದೆ ಎರಡು ದೋಸೆಕಲ್ಲುಗಳನ್ನಿಟ್ಟುಕೊಂಡು ಇಬ್ಬರು ಮಹಿಳೆಯರು ದೋಸೆ ಹೊಯ್ಯಲು ಆರಂಭಿಸುತ್ತಿದ್ದರು. ಎಲ್ಲರಿಗೂ ದೋಸೆ ಮಾಡಿ ಕೊಡುವುದೇ ಆ ಮಹಿಳೆಯರ ಬೆಳಗಿನ ಕೆಲಸ.

ಮೊದಲಿಗೆ ಮಕ್ಕಳ ಸಾಲು; ಅವರದ್ದು ಮುಗಿದ ನಂತರ ದೊಡ್ಡವರಿಗೆ. ಸಾಲಾಗಿ ಎಲ್ಲರೂ ಊಟಕ್ಕೆ ಕುಳಿತಾಗ, ಬಡಿಸಲು ಇಬ್ಬರು ಬೇಕು! ಆ ಮನೆಯಲ್ಲೇ ಒಂದು ಪುಟ್ಟ ದೇಗುಲವಿದೆ; ಪ್ರತಿ ವರ್ಷ ನವರಾತ್ರಿಯಲ್ಲಿ ಸಂಭ್ರಮದ ಆಚರಣೆ ನಡೆಯುತ್ತಿದೆ. ಇಂದಿಗೂ ಕುಚ್ಚೂರು ಮನೆಯಲ್ಲಿನ ಆ ದೇಗುಲದಲ್ಲಿ, ನವರಾತ್ರಿ ಆಚರಣೆ ಎಂದರೆ ವಿಶೇಷ ಸಂಭ್ರಮ.

ಕುಚ್ಚೂರು ಮನೆಯ ಅನತಿ ದೂರದಲ್ಲಿ ಒಂದು ದೊಂಬೆ ಇತ್ತು. ದಪ್ಪನೆಯ ಅಡಿಕೆ ಮರದ ಕಾಂಡವನ್ನು ಸೀಳಿ, ನೀರು ಹರಿದು ಹೋಗಲು ಅನುಕೂಲವಾಗುವಂತೆ ಚೊಕ್ಕಟ ಮಾಡಿದ ಕಾಂಡವೇ ದೊಂಬೆ. ಅದನ್ನು ಎತ್ತರದ ಒಂದು ಒರತೆಯ ಭಾಗಕ್ಕೆ ಜೋಡಿಸಿ, 30 ಅಡಿ ಕೆಳಗೆ ನೀರು ಬೀಳುವಂತೆ ಮನೆಯವರೇ ಮಾಡಿದ್ದರು.

ನೀರು ಬೀಳುವ ಜಾಗದಲ್ಲಿ ಕಲ್ಲಿನ ಚಪ್ಪಡಿ ಮತ್ತು ವಿಶಾಲವಾದ ಜಾಗ. ಸದಾ ನೀರು ಬೀಳುತ್ತಿದ್ದ ಆ ದೊಂಬೆಯ ಅಡಿ ನಿಂತರೆ, ದಬದಬನೆ ತಲೆಯ ಮೇಲೆ ಸುರಿವ ಜಲಧಾರೆಯ ಸ್ನಾನ. ಪ್ರತಿದಿನ ಜಲಪಾತಕ್ಕೆ ತಲೆಯೊಡ್ಡುವ ಅದೃಷ್ಟ ಆ ಮನೆಯವರಿಗೆ. ಆ ಪ್ರದೇಶದ ಸುತ್ತಲೂ ಹಲವು ಮೈಲುಗಳ ತನಕ ಕಾಡು, ಮಲೆಗಳೇ ಇದ್ದುದರಿಂದ, ಆ ನೀರಿನ ಧಾರೆ ಬೇಸಗೆಯಲ್ಲೂ ಬತ್ತುವುದಿಲ್ಲ!, ಅಲ್ಲಿನ ಅಡುಗೆಮನೆ, ಬಚ್ಚಲು ಮನೆಗಳಲ್ಲಿ ಇಂತಹುದೇ ದೊಂಬೆಗಳಿಂದ ಸದಾ ಕಾಲ ಸುರಿವ ನೀರು! ದಿನ ಇಪ್ಪತ್ತನಾಲ್ಕು ಗಂಟೆಯೂ ನಿಸರ್ಗವೇ ನೀಡಿದ ನಿರಂತರ ನಲ್ಲಿ ನೀರು!

ಆಧುನಿಕತೆ ಕುಚ್ಚೂರಿಗೂ ಬಂದ ನಂತರ, ಅಡಿಕೆ ಮರದ ಕಾಂಡ ಸೀಳಿ ಮಾಡಿದ ದೊಂಬೆಯ ಬದಲು, ಪ್ಲಾಸ್ಟಿಕ್ ಪೈಪುಗಳ ಮೂಲಕ ಈಗಲೂ ನೀರು ಬಂದು ಮನೆಯೊಳಗೇ ಸುರಿಯುತ್ತದೆ, ದಿನದ ಇಪ್ಪತ್ತನಾಲ್ಕು ಗಂಟೆಯೂ! ನಂತರವೂ ಹಲವು ಬಾರಿ ಕಬ್ಬಿನಾಲೆ ಮತ್ತು ಕುಚ್ಚೂರಿಗೆ ಹೋಗಿದ್ದುಂಟು. ಆದರೆ ಮೊದಲ ಭೇಟಿಯ ಬೆರಗು ಇನ್ನೂ ಮಾಸಿಲ್ಲ.

ಮೊದಲ ಬಾರಿ ಹೋದಾಗ ಕಂಡ ಮದುವೆಯ ಸಂಭ್ರಮ ನೆನಪಿದೆ. ಮನೆಯ ಅಂಗಳದಲ್ಲೇ ಚಪ್ಪರ ಹಾಕಿ, ಧಾರೆ ಮಂಟಪವನ್ನು ನಿರ್ಮಿಸಿದ್ದರು. ಕನಿಷ್ಟ ಆರು ಕಿ.ಮೀ. ನಡೆದು ಬರಬೇಕಾದ ಆ ಮದುವೆಗೆ, ನೂರಾರು ಜನ ಅತಿಥಿಗಳು ಸೇರಿದ್ದರು. ಕುಚ್ಚೂರು ಮನೆಯ ಅವಿಭಕ್ತ ಕುಟುಂಬವು, ನಂತರದ ದಶಕಗಳಲ್ಲಿ ಭಾಗವಾಯಿತು; ಜಮೀನು, ತೋಟ ಎಲ್ಲವೂ ಭಾಗವಾಗಿ, ಸುತ್ತು ಮುತ್ತಲಿನ ಜಾಗಗಳಲ್ಲಿ ಎಲ್ಲರೂ ಪ್ರತ್ಯೇಕ ಮನೆ ಕಟ್ಟಿಕೊಂಡರು.

ಎಲ್ಲಾ ಮನೆಗಳ ಸುತ್ತಲೂ ಮರಗಿಡಗಳು; ಒಂದು ಮನೆಯವರು ಹರಿಯುವ ತೊರೆಯ ಮೇಲೆಯೇ ಅಟ್ಟಣಿಗೆ ಕಟ್ಟಿಕೊಂಡು, ಮನೆಯ ಒಂದು ಕೊಠಡಿಯನ್ನು ನಿರ್ಮಿಸಿಕೊಂಡಿದ್ದರು. ಕಾಡಿನ ನಡುವಿನ ಬದುಕು ಕಷ್ಟ; ಶಾಲೆಗಾಗಿ ಮಕ್ಕಳು ಮೈಲಿಗಟ್ಟಲೆ ನಡೆಯಬೇಕು; ಆದ್ದರಿಂದ ಹಲವರು, ಪಟ್ಟಣಗಳತ್ತ ಸಾಗಿದರು. ಕ್ರಮೇಣ ಅಲ್ಲಿದ್ದ ಏಕೋಪಾಧ್ಯಾಯ ಸರಕಾರಿ ಶಾಲೆ ಮುಚ್ಚಿಹೋಯಿತು!

ಕುಚ್ಚೂರಿನಿಂದ ಕಾಣಿಸುವ ಸೂರ್ಯಾಸ್ತ ನೋಡಲೆಂದೇ ಹಲವು ಬಾರಿ ನಾನು ಅಲ್ಲಿಗೆ ಹೋಗಿದ್ದುಂಟು. ಕಾಡಿನ ನಡುವೆ, 2000 ಅಡಿ ಎತ್ತರದ ಕುಚ್ಚೂರಿನಲ್ಲಿ ತಂಗುವುದೆಂದರೆ, ಪ್ರಕೃತಿ ನಡುವೆ ಕಾಲ ಕಳೆಯುವ ಅಪೂರ್ವ ಅವಕಾಶ. ಆ ಮನೆಯಿಂದ ಇನ್ನೂ ಮುಂದೆ ಸಾಗಿದರೆ, ದಟ್ಟ ಕಾಡು ಮತ್ತು ಮಲೆಗಳ ನಡುವೆ ಸಾಗುವ ಮಣ್ಣು ರಸ್ತೆ, ತಿಂಗಳ ಮಕ್ಕಿ, ತೆಂಕಮಾರು ಮೊದಲಾದ ಇನ್ನೂ ಏಕಾಂಗಿ ಹಳ್ಳಿಗಳಿಗೆ ಕರೆದೊಯ್ಯುತ್ತದೆ.

ಅದೇ ಕಾಡು ದಾರಿಯಲ್ಲಿ ಸಾಗಿದರೆ ಕೂಡ್ಲುತೀರ್ಥ ಜಲಪಾತಕ್ಕೂ ಹೋಗಬಹುದು. ನಾನೊಮ್ಮೆ ಅದೇ ದಾರಿಯಾಗಿ ಕೂಡ್ಲುತೀರ್ಥಕ್ಕೆ ಚಾರಣ ಮಾಡಿದ್ದೆ. ಅಲ್ಲಿಂದ ಮುಂದೆ ಸಾಗಿದರೆ, ಕಿಗ್ಗ, ಶೃಂಗೇರಿಗೂ ದಾರಿಯಿದೆ!


ಅವೆಲ್ಲಾ ದಟ್ಟ ಕಾಡಿನ ನಡುವೆ ಸಾಗುವ ನಿಗೂಢ ಅನುಭವ ನೀಡುವ ಕಾಡುದಾರಿಗಳು. ಆ ಮನೆಯ ಹಿಂಭಾಗದಲ್ಲಿ ಏರಿ ಹೋಗಿದ್ದ ಒಂದು ಬೆಟ್ಟದ ಮಗ್ಗುಲಿನ ತುದಿಗೆ ನಾಯಿಬೆರಿ ಬೆಟ್ಟ ಎಂಬ ಹೆಸರು. ಅಲ್ಲಿಗೂ ಚಾರಣ ಮಾಡಿದ್ದೆ. ದಟ್ಟ ಕಾಡಿನ ನಡುವೆ ಸಾಗುವ ದಾರಿಯು, ತುದಿಯಲ್ಲಿ ಹುಲ್ಲುಗಾವಲಿಗೆ ತೆರೆದುಕೊಳ್ಳುತ್ತದೆ.

ಇಪ್ಪತ್ತೊಂದನೆಯ ಶತಮಾನವು ಎಲ್ಲೆಡೆ ಬದಲಾವಣೆ ತಂದಿರುವಂತೆ, ಕಬ್ಬಿನಾಲೆ-ಕುಚ್ಚೂರಿನಲ್ಲೂ ಬದಲಾವಣೆಗಳನ್ನು ತಂದಿದೆ. ಈಗ ಅರ್ಧ ದೂರದ ತನಕ ಬಸ್ ರಸ್ತೆಯಿದೆ; ಕಾರುಗಳು ಸಂಚರಿಸಬಹುದಾದ ಟಾರು ರಸ್ತೆಯಿದೆ. ವಿದ್ಯೆ ಕಲಿತ ಹಲವರು ಕೆಲಸದ ನಿಮಿತ್ತ ನಗರಗಳನ್ನೂ ಸೇರಿದ್ದಾರೆ; ಹಲವರು ಅಲ್ಲೇ ಉಳಿದಿದ್ದಾರೆ. ಆ ದಟ್ಟಕಾಡಿನ ನಡುವೆ, ಅಡಿಕೆ ತೋಟಗಳ ಮಡಿಲಲ್ಲಿ ಹೋಂಸ್ಟೇಗಳೂ ಆರಂಭವಾಗಿವೆ. ಪ್ರಕೃತಿಯ ಮಡಿಲಲ್ಲಿರುವ ಸುಂದರ ಗ್ರಾಮ ಕಬ್ಬಿನಾಲೆ ಮತ್ತು ಕುಚ್ಚೂರುಗಳು ಇಂದಿಗೂ ಸುಂದರ ತಾಣಗಳಾಗಿ ಉಳಿದುಕೊಂಡಿವೆ; ಮತ್ತೊಮ್ಮೆ ಅಲ್ಲಿಗೆ ಹೋಗಿ, ಮಳೆಗಾಲದಲ್ಲಿ ನಾಲ್ಕಾರು ದಿನ ತಂಗಬೇಕು ಎಂಬ ಆಸೆ ಮೂಡಿಸುತ್ತಿವೆ.

**- ಶಶಿಧರ** ಹಾಲಾಡಿ



## ಅಮ್ಮ ಶತಾವಧಾನಿ ಅಲ್ಲ, ಸಹಸ್ರಾವಧಾನಿ!



ಇಲ್ಲಿಯವರೆಗೆ ನಿಮಗೆ ಬೇಸಿಗೆಯ ರಜೆ ಇತ್ತು. ನಾನೂ ಕೂಡಾ ರಜೆ ಮಾಡಿದೆ. ಅನೇಕ ಓದುಗರು ಲೇಖನಗಳು ಬರುತ್ತಿಲ್ಲ ಎಂದು ಆಕ್ಷೇಪಿಸಿದ್ದಾರೆ. ಆದರೆ ಈ ಸಮಯಕ್ಕೆ ಹೊಂದಿಕೆಯಾಗುವ ಅನೇಕ ವಿಷಯಗಳಿದ್ದವು. ಆದರೆ ನನಗೆ ನಾನೇ ಹಾಕಿಕೊಂಡ ಕೋಟೆ ನನ್ನನ್ನು ಮೌನವಾಗಿಸಿತು. ಈಗ ಶಾಲೆಗಳು ಆರಂಭವಾಗಿವೆ. ಎಲ್ಲರಿಗೂ ಹೊಸ ಶೈಕ್ಷಣಿಕ ವರ್ಷದ ಶುಭಾಶಯಗಳು.

ರಜೆ ಹೇಗೆ ಕಳೆದಿರಿ? ಆಹ್ಲಾದಕರವಾಗಿತ್ತು ತಾನೇ. ಮಕ್ಕಳೇ ಡಾಲ್ಫಿನ್‌ಗಳ ಬಗ್ಗೆ ಕೇಳಿದ್ದೀರಲ್ಲ. ಅವುಗಳು ನೀರಿನಲ್ಲಿ ನಿರಂತರವಾಗಿ ಈಜುತ್ತಲೇ ಇರುತ್ತವೆ. ಅಂದರೆ ಸಾಮಾನ್ಯ ಭಾಷೆಯಲ್ಲಿ ಅವು ನಿದ್ದೆ ಮಾಡುವುದೇ ಇಲ್ಲ. ಆದರೆ ಶರೀರ ಕ್ರಿಯಾ ಶಾಸ್ತ್ರದ ಪ್ರಕಾರ ಅವು ನಿದ್ರಿಸುತ್ತವೆ. ಆದರೆ ನಿರಂತರವಾಗಿ ಈಜುತ್ತವಲ್ಲಾ ಹೇಗೆ ಎಂಬ ಪ್ರಶ್ನೆ ನಿಮ್ಮನ್ನು ಕಾಡಬಹುದು. ಹೌದು ನಮ್ಮ ಮೆದುಳಿನಲ್ಲಿ ಎರಡು ಗೋಳಾರ್ಧಗಳಿವೆಯಲ್ಲ ಅದರಲ್ಲಿ ಒಂದು ನಿದ್ರಿಸುವಾಗ ಇನ್ನೊಂದು ಎಚ್ಚರವಾಗಿರುತ್ತವೆ. ಹೀಗೆ ಅವುಗಳ ನಿದ್ದೆ ಪರ್ಯಾಯವಾಗಿ ಸಾಗುತ್ತದೆ. ಮನುಷ್ಯನಲ್ಲಿಯೂ ಇಂತಹ ಒಂದು ವ್ಯವಸ್ಥೆ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ಲವೇ? ತರಗತಿಯಲ್ಲಿ ನಿದ್ದೆ ಮಾಡುತ್ತಾ ಪಾಠ ಕೇಳಬಹುದಿತ್ತು. ಸರ್ ಹತ್ತಿರ ಬೈಸಿಕೊಳ್ಳಬೇಕಾಗಿರಲಿಲ್ಲ.

ಆದರೆ ನಮ್ಮ ಮೆದುಳು ಏಕ ಕಾಲದಲ್ಲಿ ಅನೇಕ ಕೆಲಸಗಳನ್ನು ಮಾಡಬಲ್ಲುದು. ಇದನ್ನು ಅವಧಾನತೆ ಎನ್ನುವುದು. ಏಕ ಕಾಲದಲ್ಲಿ ಹತ್ತು ಕೆಲಸಗಳನ್ನು ಮಾಡುವವರನ್ನು ದಶಾವಧಾನಿಗಳು ಎಂದರೆ ನೂರು ಕೆಲಸಗಳನ್ನು ಮಾಡಬಲ್ಲ ಶತಾವಧಾನಿಗಳು ಇದ್ದಾರಂತೆ. ಶತಾವಧಾನಿ ಆರ್ ಗಣೇಶ್ ಕೇಳಿದ್ದೀರಲ್ಲ ಅವರಿಗೆ ಹೆಸರು ಬಂದದ್ದು ಹೀಗೆಯೇ. ನೀವು ಇಂತಹ ಅವಧಾನಿಗಳನ್ನು ನೋಡಿದ್ದೀರಾ? ಇಲ್ಲ ಎಂಬ ಉತ್ತರ ಸಹಜ.

ಬೆಳಗಿನ ನಿಮ್ಮ ಮನೆಯ ಪರಿಸ್ಥಿತಿಯನ್ನು ಊಹಿಸಿಕೊಳ್ಳಿ. ಅಪ್ಪ ಅಮ್ಮ ಇಬ್ಬರೂ ಕೆಸಕ್ಕೆ ಹೋಗಬೇಕು ನೀವು ಮತ್ತು ತಂಗಿ ಶಾಲೆಗೆ ಹೋಗಬೇಕು. ಅಮ್ಮ ತಿಂಡಿ ಮಾಡಿ ತಿನ್ನಲು ಕೊಟ್ಟು ಬುತ್ತಿ ಕಟ್ಟಿ ಕೈಯಲ್ಲಿಟ್ಟು ತಾನೂ ಕೆಲಸಕ್ಕೆ ಹೋಗುತ್ತಾರೆ. ವಿವರಣೆ ತುಂಬಾ ಸರಳವೆನ್ನಿಸುತ್ತದೆ.

ಆದರೆ ಪರಿಸ್ಥಿತಿ ಬೇರೆಯೇ ಇದೆ. ಇವತ್ತು ಅಮ್ಮ ಉಪ್ಪಿಟ್ಟು ಮಾಡುತ್ತಾರೆ ಎಂದಿಟ್ಟುಕೊಳ್ಳೋಣ. ತಾಯಿ ಈರುಳ್ಳಿ ಹಚ್ಚುತ್ತಿರುತ್ತಾರೆ. ಕಣ್ಣಲ್ಲಿ ನೀರು. ಆಗ ನೀವು ಕೂಗುತ್ತೀರಿ ಅಮ್ಮಾ ನನ್ನ ಬ್ರಷ್ ಎಲ್ಲಿ? ಅಮ್ಮ ನೀವು ಎಲ್ಲಿಟ್ಟಿದ್ದೀರಿ ಎಂದು ಹೇಳಬೇಕು. ಅಮ್ಮ ಎಣ್ಣೆ ಕಾಯಲು ಇಟ್ಟು ಬಿಸಿ ಎಣ್ಣೆಗೆ ಸಾಸಿವೆ ಹಾಕಿದ್ದಾರೆ. ಸಾಸಿವೆ ಚಟಪಟ ಸಿಡಿದು ಮೈಗೆ ತಾಗದಂತೆ ಜಾಗ್ರತೆ ಮಾಡಬೇಕು, ನಂತರ ಹಾಕಬೇಕಾದ ಬೇವಿನ ಸೊಪ್ಪು, ಹಸಿ ಮೆಣಸು, ಕಡ್ಲೆ ಬೇಳೆ, ಟೊಮ್ಯಾಟೊ, ಈರುಳ್ಳಿ ಹೀಗೆ ಕ್ರಮಬದ್ಧವಾಗಿ ಜೋಡಿಸಿ ಹಾಕುತ್ತಾ ಹೋಗಬೇಕು. ಆಗ ಅಪ್ಪ ರಮೇಶ ನನ್ನ ಕನ್ನಡಕ ನೋಡಿದ್ಯೇನೋ ಎಂದು ನಿಮ್ಮ ನಿರುತ್ತರಕ್ಕೆ ಅವರು ಕೇಳುವುದು ಅಮ್ಮನನ್ನೇ. ಆಗ ಅಮ್ಮ ಅಲ್ಲಿ ಡೈನಿಂಗ್ ಟೇಬಲ್ ಮೇಲಿದೆ ನೋಡಿ ಎನ್ನಬೇಕು. ಆದರೆ ಗಂಡ ಕೇಳಿದರೆಂದು ಕಡಲೆ ಬೇಳೆಯ ಬದಲು ಈರುಳ್ಳಿ ಹಾಕುವುದಿಲ್ಲ. ಇಷ್ಟೊತ್ತಿಗೆ ಅಮ್ಮ ರವೆ ಹಾಕಿರುತ್ತಾರೆ. ಆಗ ನಿಮ್ಮ ತಂಗಿ ಅಮ್ಮ ನನ್ನ ಯೂನಿಫಾರ್ಮ್ ಇಸ್ತ್ರಿಯಾಗಿಲ್ಲ ಎನ್ನುತ್ತಾಳೆ. ಸ್ವಲ್ಪ ತಡಿ ಮಾಡಿಕೊಡುತ್ತೇನೆ ಎನ್ನುತ್ತಲೇ ಸರಿಯಾದ ಪ್ರಮಾಣದ ನೀರು, ಉಪ್ಪು ಹಾಕಿ ಎರಡು ಸಾರಿ ತಿರುಗಿಸಿ ನಿಧಾನ ಗಟ್ಟಿಯಾಗುವಾಗ ಉರಿ ಕಡಿಮೆ ಇಟ್ಟು ಇಸ್ತ್ರಿ ಹಾಕಲು ಓಡಿ ಬರುತ್ತಾರೆ. ಮಧ್ಯೆ ಮಧ್ಯೆ ಹೋಗಿ ಉಪ್ಪಿಟ್ಟು ತಿರುವ ಬೇಕು. ನಿಮ್ಮ ಬುತ್ತಿಗಳನ್ನು ಗುರುತಿಸಿ ಅಷ್ಟಷ್ಟು ಪ್ರಮಾಣದ ಉಪ್ಪಿಟ್ಟು ಹಾಕಬೇಕು. ಅಪ್ಪನ ಉಪ್ಪಿಟ್ಟು ಮಗನಿಗೆ ಅಣ್ಣನ ಉಪ್ಪಿಟ್ಟು ತಂಗಿಗೆ ಆಗುವುದೇ ಇಲ್ಲ. ಇದೆಲ್ಲದರ ಮಧ್ಯೆ ತಾನೂ ರೆಡಿಯಾಗುತ್ತಾಳೆ. ನೂರು ಸೀರೆಗಳ ನಡುವೆ ನಿನ್ನೆ ಉಟ್ಟ ಸೀರೆ ಇವತ್ತು ಉಡುವಂತಿಲ್ಲ. ಆ ಸೀರೆಗೆ ಮ್ಯಾಚಿಂಗ್ ಬ್ಲೌಸ್. ಅಬ್ಬ ಏಕ ಕಾಲದಲ್ಲಿ ಎಷ್ಟೊಂದು ಕೆಲಸಗಳು. ನಿಮ್ಮ ಸ್ಕೂಲ್ ಬಸ್ಸಿನ ಸಮಯ ಅಪ್ಪನ ಹೊರಡುವ ಸಮಯ ಎಲ್ಲ ನೆನಪಿಡಬೇಕು. ಅಂದರೆ ಅಮ್ಮ ಶತಾವಧಾನಿ ಅಲ್ಲ ಸಹಸ್ರಾವಧಾನಿ.

ನೀವು ಅಮ್ಮನಿಗೆ ಸ್ವಲ್ಪ ಸಹಕರಿಸಿದರೆ ಅಮ್ಮನ ಮೇಲಿನ ಒತ್ತಡ ಕಡಿಮೆಯಾಗುತ್ತದೆಯಲ್ಲವೇ? ಸಹಾಯ ಮಾಡುತ್ತೀರಿ ತಾನೆ?


**- ದಿವಾಕರ ಶೆಟ್ಟಿ ಎಚ್,** ಮಂಗಳೂರು

## ಮಯೂರ ಹಾಸ್ಯ

### ನವ್ಯ ಚಿತ್ರ

ಕೇಶವ ಸ್ನೇಹಿತ ನಾಣಿಗೆ ನವ್ಯ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿದ್ದಕ್ಕೆ ಅಭಿನಂದನೆ ಹೇಳುತ್ತಾ, ಅಲ್ಲ ನಾಣಿ ನಿನಗೆ ಪ್ರಥಮ ಬಹುಮಾನ ಬಂದಿರುವುದೇನೋ ಸರಿ. ಆದರೆ ಆ ಚಿತ್ರ ಮಾತ್ರ ನನಗೇನೂ ಸ್ವಲ್ಪವೂ ಅರ್ಥವಾಗಲಿಲ್ಲ. ಆ ಚಿತ್ರದ ನಿಗೂಢತೆಯಾದರೂ ಏನು? ಎಂದ.

ಅದಕ್ಕೆ ನಾಣಿ ಆ ಚಿತ್ರ ನನಗೆ ಅರ್ಥವಾಗಿದ್ದರೆ ತಾನೇ ನಿನಗೆ ಹೇಳೋದು. ಅದನ್ನೇನೂ ನಾನು ಬರೆದಿರಲಿಲ್ಲ. ನನ್ನ ಪುಟ್ಟ ಮಗಳು ನಾನು ಇಟ್ಟಿದ್ದ ಬಿಳಿ ಹಾಳೆಯ ಮೇಲೆ ಇಂಕು ಚೆಲ್ಲಿ ಬಿಟ್ಟಿದ್ದಳು. ನಾನು ಮರೆತು, ಬರೆದಿದ್ದ ಚಿತ್ರದೊಂದಿಗೆ ಅದನ್ನು ಕಳಿಸಿಬಿಟ್ಟಿದ್ದೆ ಅಷ್ಟೇ ಎಂದಾಗ ಕೇಶವನಿಗೆ ಸುಸ್ತೋ ಸುಸ್ತು!



**- ಶಂಕರೇಗೌಡ** ತುಂಬಕೆರೆ

★★★★★★★★★★★★★★★★★★

### ಸೋಲೋ ಕಾಂಪಿಟೇಷನ್

ಅವತ್ತು ಕಿಟ್ಟಿ ಶಾಲೆಯ ವಾರ್ಷಿಕ ಕಾರ್ಯಕ್ರಮಗಳ ವಿಧ ರೀತಿಯ ಸ್ಪರ್ಧೆಗಳಿಗೆಂದು ಹೊರಡುತ್ತಿದ್ದ. ಅಮ್ಮ-ಅಪ್ಪನಿಗೆ ನಮಸ್ಕರಿಸಿ, ಅಜ್ಜಿಗೂ ನಮಸ್ಕಾರ ಮಾಡಿದಾಗ ಅಜ್ಜಿ ಕೇಳಿದ್ರು. ಏನೇನು ಕಾಂಪಿಟೇಷನ್ ಇದೆ ಕಿಟ್ಟಿ? ನೀನು ಆಗಲೇ ಕೆಲವು ಸ್ಪರ್ಧೆಗಳಲ್ಲಿ ಗೆದ್ದಿದ್ದೀಯಾ ಅಲ್ವಾ ಅಂದ್ರು..

ಇಲ್ಲಜ್ಜಿ, ಅದು ಗ್ರೂಪ್ ಕಾಂಪಿಟೀಷನ್, ಇದು ಸೋಲೋ ಸ್ಪರ್ಧೆ. ಅಂದಾಗ ಅಜ್ಜಿ ಅಂದ್ರು.. ಏ... ಅದೆಂಥದೋ..ಸ್ಪರ್ಧೆ ಇಡೋದೇ ಗೆಲ್ಲೋಕೆ ಅಂತ. ಸೋಲೋಕೆ ಯಾಕೋ ಸ್ಪರ್ಧೆ ಇಡಬೇಕು ಅಂದಾಗ. ಅಪ್ಪ, ಅಮ್ಮ, ಕಿಟ್ಟಿ ಎಲ್ಲರೂ ನಗೆಗಡಲಿನಲ್ಲಿ ಮುಳುಗಿದರು. ಆ ನಂತರ ಕಿಟ್ಟಿ ಸೋಲೋ ಅರ್ಥವನ್ನು ಬಿಡಿಸಿ ಹೇಳಿದ, ಅಜ್ಜಿ ಸೋಲೋ ಅಂದ್ರೆ ಒಬ್ಬರೇ ಸ್ಪರ್ಧೆಯಲ್ಲಿ ಭಾಗವಹಿಸುವುದು ಅಂತ.. ಸೋಲೋದು ಅಂತಲ್ಲ ಅಂದಾಗ ಅಜ್ಜಿನೂ ಮನಸಾರೆ ನಕ್ಕರು.

**- ಸುಮನಾ**

## ಬೇಸಿಗೆ ರಜೆಯ ದಿನಚರಿ

**» ಊರಿನ ಬೇರೆ ಜನರೂ ನೀರು ಸೇದಲು ಬರುತ್ತಿದ್ದರು. ನಾವು ನಮ್ಮ ಸರತಿಗಾಗಿ ಕಾಯುತ್ತಾ ನಮ್ಮ ಮುಂಚೆ ಇದ್ದವರಿಗೆ ಸಹಾಯ ಮಾಡಿ, ನಮ್ಮ ಕೊಡಪಾನ ಬಾವಿಯಲ್ಲಿ ಬಿಟ್ಟು ನಮ್ಮ ಮುಂದಿನ ಸರದಿಗೆ ಕಾಯುವವರ ಸಹಾಯದಿಂದ ನೀರು ಹೊತ್ತುಕೊಂಡು ಬರುತ್ತಿದ್ದೆವು. ಹೀಗೆ ಮನೆಯಲ್ಲಿ ಇರುವ ಕೊಳಗ, ಸೋರೆ, ಎಲ್ಲಾ ತುಂಬಿದ ಮೇಲೆ, ತುಂಬಿದ ಕೊಡಪಾನಗಳನ್ನು ಇಳಿಸಬೇಕಾಗಿತ್ತು. ಅಷ್ಟೊತ್ತಿಗೆ ಕತ್ತಲಾಗುವ ಸಮಯ. ಮನೆಯಲ್ಲಿರುವ ಲಾಟೀನು, ದೀಪಗಳ ಗಾಜುಗಳನ್ನು ಬೂದಿಯಿಂದ ತಿಕ್ಕಿ ತೊಳೆದು, ಅವುಗಳಿಗೆ ಸೀಮೆಎಣ್ಣೆ ತುಂಬಿಸಿ ರೆಡಿ ಮಾಡುತ್ತಿದ್ದೆವು.**



ಆಯ್ತು ಹೋಗಪ್ಪ, ಅಪ್ಪ, ಅರೆ ಮನಸ್ಸಿನಿಂದ, ಅರೆ ಸಿಟ್ಟಿನಿಂದ, ಹೇಳಿದ್ದೇ ತಡ, ಒಂದು ಬಟ್ಟೆ ಚೀಲದಲ್ಲಿ ಕೈಗೆ ಸಿಕ್ಕಷ್ಟು ಬನೀನು, ಚಡ್ಡಿ, ಶರ್ಟು, ನಿಕ್ಕರ್‌ಗಳನ್ನು ಇಟ್ಟುಕೊಂಡು, ಸಪ್ಪೆ ಮೋರೆ ಹಾಕಿಕೊಂಡು ಬಸ್ ಸ್ಟ್ಯಾಂಡಿನ ಕಡೆ ಹೋಗುತ್ತಿದ್ದ ಅಜ್ಜಿ (ಅಮ್ಮನ ಅಮ್ಮ) ಬಳಿ ಓಡಿ ಹೋಗಿ, ಜೊತೆ ಸೇರಿದಾಗ ಅಜ್ಜಿಯ ಮುಖದಲ್ಲೂ ಸಂತೋಷ, ಸಂಭ್ರಮ.

ಇದು ಅರವತ್ತರ ದಶಕ. ಆಗ ನಾವು ಚಿತ್ರದುರ್ಗದಲ್ಲಿ ಪ್ರೈಮರಿ ಸ್ಕೂಲ್ ವಿದ್ಯಾರ್ಥಿಗಳು. ಬೇಸಿಗೆ ರಜ ಪ್ರಾರಂಭವಾದ ತಕ್ಷಣ, ನಮ್ಮ ಅಜ್ಜಿ ನಮ್ಮನ್ನು ಊರಿಗೆ ಕರೆದುಕೊಂಡು ಹೋಗಲು ಬರುತ್ತಿದ್ದರು. ಆದರೆ ಇನ್ನೂ ನಮ್ಮ ಅಣ್ಣಗಳಿಗೆ ಪರೀಕ್ಷೆಗಳು ನಡೆಯುತ್ತಿದ್ದು, ಅವರಿಗೆ ರಜೆ ಬಿಟ್ಟ ನಂತರ ಕಳುಹಿಸುವುದಾಗಿ ಖಡಾ ಖಂಡಿತವಾಗಿ ಅಪ್ಪ ಹೇಳಿದಾಗ, ಅಜ್ಜಿ ಸಪ್ಪೆ ಮೋರೆ ಹಾಕಿಕೊಂಡು ವಾಪಾಸ್‌ಹೋಗುತ್ತಿದ್ದರು. ಆದರೆ ನಮ್ಮ ಹಠ ಮತ್ತು ಅಳು ಮೋರೆ ನೋಡಿ ಅರ್ಧ ಸಿಟ್ಟಿನಿಂದ, ಅರ್ಧ ಬೇಜಾರಿನಿಂದ, ಅಪ್ಪ ಅನುಮತಿ ನೀಡುತ್ತಿದ್ದರು. ಹುಡುಗರು ಇಲ್ಲೇ ಇದ್ದು ರಜೆಯಲ್ಲಿ ಮಗ್ಗಿ, ಇಂಗ್ಲಿಷ್ ಗ್ರಾಮರ್, ಜನರಲ್ ನಾಲೆಡ್ಜ್‌ಗಳನ್ನು ಕಲಿಯಲಿ, ಆ ಹಳ್ಳಿಗೆ ಹೋಗಿ ಸುಮ್ಮನೆ ತಿರುಗಿ ತಿರುಗಿ ಹಾಳಾಗುತ್ತಾರೆ, ಎನ್ನುವುದು ಅವರ ಅನಿಸಿಕೆ.

ನಾವು ಅಜ್ಜಿಯ ಜೊತೆ ಜ್ಯೋತಿ ಬಸ್‌ನಲ್ಲಿ ಅವರ ಊರಿಗೆ ಹೋಗುತ್ತಿದ್ದೆವು. ನಮ್ಮ ಅಜ್ಜಿಯ ಊರಿನವರೆಗೂ ಯಾವ ಬಸ್ಸುಗಳೂ ಇರುತ್ತಿರಲಿಲ್ಲ, ಸಂಜೆ 5:30ಕ್ಕೆ ಚಿತ್ರದುರ್ಗದಿಂದ ಹೊರಟರೆ ನಮ್ಮ ಅಜ್ಜಿಯ ಊರಿನಿಂದ ಎರಡು ಕಿಲೋಮೀಟರ್ ದೂರದಲ್ಲಿದ್ದ ಮುಷ್ಟಲಗುಮ್ಮಿಗೆ ಹೋಗುತ್ತಿತ್ತು. ಅಷ್ಟರಲ್ಲಿ ರಾತ್ರಿ 8:30 ಆಗಿ ಕತ್ತಲಲ್ಲಿ ಹೋಗಲು ಯಾರೂ ಜೊತೆ ಇಲ್ಲದಿದ್ದರೆ ಅಲ್ಲೇ ಸಾಹುಕಾರರ ಮನೆಯ ಒಳ ಜಗಲಿಯ ಮೇಲೆ ಮಲಗಿ, ಬೆಳಗ್ಗೆ ಎದ್ದು ನಡೆದು ಹೋಗುತ್ತಿದ್ದೆವು. ಮಧ್ಯದಲ್ಲಿ ಚಿನ್ನಹಗರಿ ಹಳ್ಳ. ಅದರಲ್ಲಿ ಕೈ ಕಾಲು ಮುಖ ತೊಳೆದು ಒರಸಿಕೊಳ್ಳಲು ಟವಲ್ ಇಲ್ಲದೆ ಹಾಗೇ ಹೋಗ್ತಾ ಹೋಗ್ತಾ ಒಣಗಿಸಿ ಕೊಳ್ಳುತ್ತಿದ್ದೆವು.

ಊರು ಮುಟ್ಟಿದ ನಂತರ ನಮ್ಮ ದಿನಚರಿಯೆಲ್ಲಾ ನಮ್ಮ ದೊಡ್ಡಮ್ಮನವರ ಜೊತೆ. ಬೆಳಗ್ಗೆ ಎದ್ದ ತಕ್ಷಣ ಹಸುಗಳನ್ನು ಊರ ಮುಂದಿನ ಮಂದೆಗೆ ಹೊಡೆದುಕೊಂಡು ಹೋಗಬೇಕು. ಹಸುಗಳು ಅಭ್ಯಾಸ ಬಲದಿಂದ ತಮ್ಮಷ್ಟಕ್ಕೆ ತಾವೇ ಹೋದರೂ, ನಾವು ಒಂದು ಜೋಳದ ದಂಟು ಕೈಯಲ್ಲಿ ಹಿಡಿದು ಹೊಯ್ ಹೋಯ್‌ಎನ್ನುತ್ತಾ ಹೊಡೆದುಕೊಂಡು ಹೋಗಿ, ನಮ್ಮ ಹಸುಗಳು ಊರ ಮುಂದಿನ ಊರ ದನಗಳ ಗುಂಪಿಗೆ ಸೇರಿಸಿದ ಮೇಲೆ, ಅವುಗಳನ್ನು ಎಲ್ಲಾ ಹಸುಗಳ ಜೊತೆ ಹೊಡೆದುಕೊಂಡು ಹೋಗುತ್ತಾರೋ ಇಲ್ಲವೋ ಅಂತ ಅನುಮಾನವಾಗಿ, ಅಲ್ಲೇ ಕಟ್ಟೆಯ ಮೇಲೆ ಕೂಡುತ್ತಿದ್ದೆವು. ಊರಿನಲ್ಲಿರುವ ಎಲ್ಲಾ ಹಸುಗಳು ಬಂದ ಮೇಲೆ ದನ ಕಾಯುವವರು ಅವುಗಳನ್ನೆಲ್ಲಾ ಮೇಯಿಸಲು, ಹೊಡೆದುಕೊಂಡು ಹೋಗುವವರೆಗೂ ಕುಳಿತು, ನಂತರ ಹಿಂದಿರುಗಿ ಬರುತ್ತಿದ್ದೆವು. ನಂತರ ಎಮ್ಮೆಗಳ ಸರದಿ.

ಅವೆರಡನ್ನು ಕಳುಹಿಸಿದ ನಂತರ (ಮಕ್ಕಳನ್ನು ಶಾಲೆಗೆ ಕಳುಹಿಸಿದ ಹಾಗೆ), ನಾವು ಸ್ನಾನ ಮಾಡಿ, ಪಕ್ಕದಲ್ಲೇ ಇದ್ದ ಈಶ್ವರನ ಗುಡಿಗೆ ಹೋಗಬೇಕು. ಬರೀ ಕೈಯಲ್ಲಿ ಹೋಗುವ ಹಾಗಿಲ್ಲ, ಸಣ್ಣ ಬೆಲ್ಲದ ಚೂರನ್ನು ಹಿಡಿದು ದೇವಸ್ಥಾನಕ್ಕೆ ಹೋಗಿ, ಎಗರಿ ಎಗರಿ ಗಂಟೆ ಹೊಡೆದು, ಕೈಮುಗಿದು, ಸಾಷ್ಟಾಂಗ ನಮಸ್ಕಾರ ಮಾಡಿ, ತೆಗೆದುಕೊಂಡು ಹೋದ ಬೆಲ್ಲದ ಚೂರನ್ನು ಎರಡು ಭಾಗ ಮಾಡಿ ಒಂದು ಭಾಗ ಈಶ್ವರನಿಗೆ, ಇನ್ನೊಂದು ಭಾಗ ಎದುರಿಗೆ ಕುಳಿತಿದ್ದ ಬಸವಣ್ಣನಿಗೆ, ಹಂಚಿ ಕೈಮುಗಿದು, ಅಡ್ಡ ಬಿದ್ದು ಹೊರ ಬರುವ ವೇಳೆಗೆ, ಅದೇ ಊರಿನ ಮೂಕ ಜಯವ್ವ ( ನಮ್ಮದೇ ವಯಸ್ಸಿನ ಮಾತನಾಡಲು ಬಾರದ ಮೂಕ ಹುಡುಗಿ) ಬಂದು, ದೇವರಿಗೆ ಕೈ ಮುಗಿದು ನಾವು ಇಟ್ಟ ಬೆಲ್ಲವನ್ನು ತಿಂದುಬಿಡುತ್ತಿದ್ದಳು. ನಾವು ಯಾಕೆ ತಿಂದೆ ಅಂತ ಜಗಳ ಮಾಡಿದಾಗ, ಮಾತನಾಡಲು ಬಾರದಿದ್ದರೂ ಕೈ ಬಾಯಿ ಸನ್ನೆ ಮಾಡಿ, ಅದು ದೇವರು ಕೊಟ್ಟ ಪ್ರಸಾದ, ಅದಕ್ಕೆ ತಿಂದೆ ಎನ್ನುತ್ತಿದ್ದಳು.

ನಂತರ ಮನೆಗೆ ಬಂದು ಬೆಳಗಿನ ಉಪಹಾರ ಆಗುವವರೆಗೂ ಕಾಯುತ್ತಾ ಕಟ್ಟೆ ಮೇಲೆ ಕೂತಿರುವಾಗ ಕಂತೇ ಭಿಕ್ಷ ಎಂದು ಪಕ್ಕದ ಈಶ್ವರ ಗುಡಿಯಲ್ಲಿ ಪೂಜೆ ಮಾಡುವ ಅಯ್ಯನವರು ಬಂದಾಗ, ಅವರಿಗೆ ಭಿಕ್ಷೆ ಕೊಡಲು ಪೈಪೋಟಿಯ ಮೇಲೆ, ದೊಡ್ಡಮ್ಮ ಕೊಟ್ಟ ಏನಾದರೂ ತಿನಿಸನ್ನು ಕೊಟ್ಟು ಅವರ ಕಾಲಿಗೆ ಅಡ್ಡ ಬಿದ್ದು ಆಶೀರ್ವಾದ ಪಡೆದುಕೊಳ್ಳುತ್ತಿದ್ದೆವು. ಸ್ವಲ್ಪ ಹೊತ್ತಿನ ನಂತರ ಮತ್ತೊಬ್ಬ ಅಯ್ಯನವರು, ಕೋರಾಣ್ಯದಲಿ ಭಿಕ್ಷೆ ಅಂತ ಬರುತ್ತಿದ್ದರು ಅವರಿಗೆ ಯಾವುದಾದರೂ ಧಾನ್ಯವನ್ನು ಕೊಡಬೇಕಾಗಿತ್ತು, ಅದಕ್ಕೂ ಮತ್ತೆ ಪೈಪೋಟಿ. ಅಷ್ಟೊತ್ತಿಗೆ ಬೆಳಗಿನ ಉಪಹಾರ ತಿನ್ನಲು ಕಟ್ಟೆಯ ಮೇಲೆ ಸಾಲಾಗಿ ಕೂರುತ್ತಿದ್ದೆವು.

ಅಷ್ಟರಲ್ಲಿ ಹೊಲಕ್ಕೆ ಬುತ್ತಿ ತೆಗೆದುಕೊಂಡು ಹೋಗುವ ಹೊತ್ತಾಗುತ್ತಿತ್ತು. ನಸುಕಿನಲ್ಲೇ ಎದ್ದು, ಬೇಸಾಯಕ್ಕೆ ಹೋದ ದೊಡ್ಡಪ್ಪನವರಿಗೆ ಊಟ ತೆಗೆದುಕೊಂಡು ಹೋಗುತ್ತಿದ್ದೆವು. ಮುದ್ದೆ, ಅನ್ನ, ಸಾರು, ಮೊಸರು, ಮಜ್ಜಿಗೆ, ಚಟ್ನಿ ಎಲ್ಲಾ ಒಂದು ಬಿದಿರಿನ ಬುಟ್ಟಿಯಲ್ಲಿ ಇಟ್ಟುಕೊಂಡು ನಮ್ಮ ದೊಡ್ಡಮ್ಮ ಹೊರಟರೆ, ಅವರ ಜೊತೆ ನಾವೂ ಹೊರಡುತ್ತಿದ್ದೆವು. ಬುಟ್ಟಿ ಹೊರಲು ನಾ ಮುಂದು ತಾ ಮುಂದು ಅಂತ ಜಗಳ. ಸ್ವಲ್ಪ ಸ್ವಲ್ಪ ದೂರ ಒಬ್ಬೊಬ್ಬರ ತಲೆ ಮೇಲೆ ಇಡುತ್ತಿದ್ದರು. ನಾವು ಹೊಲ ಮುಟ್ಟುವಷ್ಟರಲ್ಲಿ ಮಜ್ಜಿಗೆ ಸಾರು ತುಳುಕಾಡಿ ಚೆಲ್ಲಿ ದೊಡ್ಡಮ್ಮನ ಕೈಯಲ್ಲಿ ಬೈಸಿಕೊಳ್ಳುತ್ತಿದ್ದೆವು. ಹೊಲ ಮುಟ್ಟಿದ ನಂತರ ಭಾವಿಯ ಬಳಿಯಲ್ಲಿದ್ದ ಮಾವಿನ ಮರದ ಕೆಳಗೆ ಬುಟ್ಟಿ ಇಟ್ಟುಕೊಂಡು ಕೂರುತ್ತಿದ್ದೆವು. ಅಷ್ಟರಲ್ಲಿ ಪಂಪ್ ಚಾಲು ಮಾಡಿದ್ದರೆ, ಅಲ್ಲಿ ನೀರಿನಲ್ಲಿ ಆಟವಾಡಿ, ಬಟ್ಟೆಯನ್ನೆಲ್ಲ ನೆನೆಸಿಕೊಂಡು, ಬಿಸಿಲಿನಲ್ಲಿ ಒಣಗಿಸಿ ಕೊಳ್ಳುತ್ತಿದ್ದೆವು. ದೊಡ್ಡಪ್ಪನವರು ಕೈಕಾಲು ಮುಖ ತೊಳೆದು ಊಟಕ್ಕೆ ಬರುತ್ತಿದ್ದರು. ಅವರ ಜೊತೆ ನಾವೂ (ಮನೆಯಲ್ಲಿ ತಿಂದು ಬಂದಿದ್ದರೂ ಸಹ) ತಿನ್ನಲು ಕೈ ಒಡ್ಡಿ ಕೂರುತ್ತಿದ್ದೆವು. ಇದು ಮೊದಲೇ ಗೊತ್ತಿದ್ದ ದೊಡ್ಡಮ್ಮ ಸ್ವಲ್ಪ ಜಾಸ್ತಿಯೇ ಇಟ್ಟುಕೊಂಡು ಬಂದಿರುತ್ತಿದ್ದರು. ಅವರ ಜೊತೆ ಮಾವಿನ ಮರದ ನೆರಳಿನಲ್ಲಿ ಊಟ ಮಾಡಿ, ಅವರ ಜೊತೆ ನೇಗಿಲು ಹಿಡಿದು ಹೊಲ ಉಳಲು ಹೋಗುತ್ತಿದ್ದೆವು. ನಿಮಗೆ ಆಗೊಲ್ಲ ಬಿಡ್ರೋ ಅಂದರೂ ಬಿಡದೆ ಹಠ ಮಾಡಿ ಸ್ವಲ್ಪ ದೂರ ಜೊತೆಯಲ್ಲಿ ಹೋಗುತ್ತಿದ್ದೆವು. ನಂತರ ಭಾವಿಯ ಬಳಿ ಬಂದು ಬಟ್ಟೆ ಬಿಚ್ಚಿ ಬಾವಿ ಒಳಗೆ ಇಳಿಯಲು ಮಾಡಿದ ದಾರಿಯಲ್ಲಿ ಇಳಿದು, ನೀರಿನ ಆಳಕ್ಕೆ ತಕ್ಕಂತೆ ಮೇಲಿನಿಂದ ಎಗರಿ ಈಜುತ್ತಿದ್ದೆವು. ಎಷ್ಟೋ ಹೊತ್ತಿನ ನಂತರ ನಮ್ಮ ದೊಡ್ಡಮ್ಮ ಸಾಕು ನಡಿರೋ ಹೊತ್ತಾಯಿತು ಮನೆಗೆ ಹೋಗಬೇಕು ಎನ್ನುತ್ತಿದ್ದರು. ಮತ್ತೆ ಖಾಲಿ ಬುಟ್ಟಿ ಹೊರಲು ಪೈಪೋಟಿ. ಈಗ ಚೆಲ್ಲುವಂತಹದು ಏನೂ ಇರದಿದ್ದರಿಂದ, ದೊಡ್ಡಮ್ಮನೂ ನಿರಾತಂಕವಾಗಿ ಬುಟ್ಟಿ ಹೊರಿಸುತ್ತಿದ್ದರು.

ಮನೆಗೆ ಬಂದು ಸ್ವಲ್ಪ ಹೊತ್ತು ಚೌಕ ಬಾರ, ಗೊಟ್ಟುಗುಣಿ, ಆಡಿ, ಏನಾದರೂ ರುಬ್ಬುವುದು, ಬೀಸುವುದು ಇದ್ದರೆ ಅಲ್ಲೂ ದೊಡ್ಡಮ್ಮನವರಿಗೆ ಸಹಾಯ (ಸಹಾಯಕ್ಕಿಂತಾ ನಮ್ಮಿಂದ ಅವರಿಗೆ ತೊಂದರೆಯೇ ಜಾಸ್ತಿ) ಮಾಡುತ್ತಿದ್ದೆವು. ಅಷ್ಟು ಹೊತ್ತಿಗೆ ಮಧ್ಯಾನ್ಹದ ಊಟ ಮತ್ತು ವಿಶ್ರಾಂತಿ. ಸ್ವಲ್ಪ ಬಿಸಿಲು ಕಡಿಮೆ ಆದ ಮೇಲೆ ಬಟ್ಟೆ ಒಗೆಯುವ ಕಾರ್ಯಕ್ರಮ. ಎಲ್ಲರೂ ಬಿಟ್ಟ ಬಟ್ಟೆಗಳನ್ನು ಎಷ್ಟು ಜನರಿರುತ್ತಾರೋ ಅಷ್ಟು ಗಂಟುಗಳನ್ನು ಮಾಡಿ, ತಲೆ ಮೇಲೆ ಹೊರೆಸುತ್ತಿದ್ದರು. ಎಲ್ಲಾ ಊರ ಮುಂದಿನ ಹಳ್ಳಕ್ಕೆ ಹೋಗಿ ಒಬ್ಬೊಬ್ಬರು ಒಂದೊಂದು ಬಂಡೆಗಳನ್ನು ಹಿಡಿದು, ಆ ಬಂಡೆಗಳನ್ನು ತೊಳೆದು, ಕೂರುತ್ತ ಇದ್ದೆವು. ಇದೆಲ್ಲಾ ನಮ್ಮ ದೊಡ್ಡಮ್ಮನ ತರಬೇತಿ. ಅಷ್ಟರಲ್ಲೇ ದೊಡ್ಡಮ್ಮ ಚಿಕ್ಕ ಚಿಕ್ಕ ಬಟ್ಟೆಗಳನ್ನು ನೀರಿನಲ್ಲಿ ನೆನೆಸಿ ಸೋಪು ಹಾಕಿ ನಮಗೆ ಒಗೆಯಲು ಕೊಡುತ್ತಿದ್ದರು. ಬಟ್ಟೆಯನ್ನು ಒಗೆಯುವಾಗ, ಬಟ್ಟೆ ಕುಪ್ಪೆ, ಕುಪ್ಪೆ ಬೀಳಬೇಕು, ಇಲ್ಲದಿದ್ದರೆ, ಬಟ್ಟೆ ಹರಿದು ಹೋಗುತ್ತದೆ ಎಂದು ಹೇಳುತ್ತಿದ್ದರು. ನಾವು ಬಟ್ಟೆ ಒಗೆದು ನೀರಿನಲ್ಲಿ ಜಾಲಾಡಿಸಿ ಸೋಪ್ ಎಲ್ಲಾ ಹೋದ ನಂತರ ಹಿಂಡಿ ಒಣಹಾಕಿ. ಬಂದು ಮುಂದಿನ ಬಟ್ಟೆ ತೆಗೆದುಕೊಳ್ಳುತ್ತಿದ್ದೆವು. ಈ ರೀತಿ ಬಟ್ಟೆ ಒಗೆಯುವುದೆಲ್ಲ ಮುಗಿದ ಮೇಲೆ, ಸ್ವಲ್ಪ ನೀರು ಜಾಸ್ತಿ ಇರುವ ಕಡೆ ನೀರಿನಲ್ಲಿ ಮಲಗಿ, ಕೈ ಮೈ ಎಲ್ಲಾ ಉಜ್ಜಿಕೊಂಡು, ಹಾಗೆ ಮರಳಿನ ಮೇಲೆ ಹೋಗಿ ಮೈ ಒಣಗಿಸಿ ಕೊಳ್ಳುತ್ತಿದ್ದೆವು. ಅಷ್ಟರಲ್ಲಿ ನಾವು ಒಗೆದು ಹಾಕಿದ ಬಟ್ಟೆಗಳು ಒಣಗಿರುತ್ತಿದ್ದವು. ಅವುಗಳನ್ನು ನೀಟಾಗಿ ಮಡಚಿ, ಸೀರೆ ಪಂಚೆಗಳಾದರೆ ಇಬ್ಬಿಬ್ಬರು ಸೇರಿ ಮಡಚುತ್ತಿದ್ದೆವು. ಈ ರೀತಿ ಒಗೆದ ಬಟ್ಟೆಗಳನ್ನು ಮತ್ತೇ ಗಂಟು ಕಟ್ಟಿಕೊಂಡು ಮನೆಗೆ ಬರುತ್ತಿದ್ದೆವು. ಅಷ್ಟು ಹೊತ್ತಿಗೆ ಅದು ನೀರು ಸೇದುವ ಸಮಯ.

ಪಕ್ಕದಲ್ಲೇ ಇದ್ದ ಸೇದೋ ಭಾವಿಗೆ ಹಗ್ಗ ಕೊಡಪಾನಗಳನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಆಗ ಊರಿನ ಬೇರೆ ಜನರೂ ನೀರು ಸೇದಲು ಬರುತ್ತಿದ್ದರು. ನಾವು ನಮ್ಮ ಸರತಿಗಾಗಿ ಕಾಯುತ್ತಾ ನಮ್ಮ ಮುಂಚೆ ಇದ್ದವರಿಗೆ ಸಹಾಯ ಮಾಡಿ, ನಮ್ಮ ಕೊಡಪಾನ ಬಾವಿಯಲ್ಲಿ ಬಿಟ್ಟು ನಮ್ಮ ಮುಂದಿನ ಸರದಿಗೆ ಕಾಯುವವರ ಸಹಾಯದಿಂದ ನೀರು ಹೊತ್ತುಕೊಂಡು ಬರುತ್ತಿದ್ದೆವು. ಹೀಗೆ ಮನೆಯಲ್ಲಿ ಇರುವ ಕೊಳಗ, ಸೋರೆ, ಎಲ್ಲಾ ತುಂಬಿದ ಮೇಲೆ, ತುಂಬಿದ ಕೊಡಪಾನಗಳನ್ನು ಇಳಿಸಬೇಕಾಗಿತ್ತು. ಅಷ್ಟೊತ್ತಿಗೆ ಕತ್ತಲಾಗುವ ಸಮಯ. ಮನೆಯಲ್ಲಿರುವ ಲಾಟೀನು, ದೀಪಗಳ ಗಾಜುಗಳನ್ನು ಬೂದಿಯಿಂದ ತಿಕ್ಕಿ ತೊಳೆದು, ಅವುಗಳಿಗೆ ಸೀಮೆಎಣ್ಣೆ ತುಂಬಿಸಿ ರೆಡಿ ಮಾಡುತ್ತಿದ್ದೆವು. ಕತ್ತಲಾದ ನಂತರ ದೇವರ ದೀಪ ಹಚ್ಚಿ ಲಾಟೀನುಗಳನ್ನು ಹಚ್ಚಿ ಇಡುತ್ತಿದ್ದರು. ಆಗ ನಾವೆಲ್ಲ ಲಾಟೀನು ಬೆಳಕಿನಲ್ಲಿ ಸುತ್ತ ಕುಳಿತು ಸ್ವಲ್ಪ ಹೊತ್ತು ಓದುವುದು ಬರೆಯುವುದು ಮಾಡಬೇಕಾಗಿತ್ತು. ಅಷ್ಟರಲ್ಲಿ ರಾತ್ರಿ ಅಡುಗೆ ತಯಾರಾಗುತ್ತಿತ್ತು. ರಾತ್ರಿ ಊಟ ದೊಡ್ಡಪ್ಪನವರ ಜೊತೆ ಕುಳಿತು ಬಿಸಿ ಬಿಸಿ ಅನ್ನ ತುಪ್ಪ ಉಪ್ಪು ಮಿಟಿಕೆ ಮಾಡಿ ತಿನ್ನುತ್ತಿದ್ದೆವು. ಊಟದ ನಂತರ ದೊಡ್ಡ ಕಟ್ಟೆಯ ಮೇಲೆ ದೊಡ್ಡದೊಂದು ಜಮಖಾನ ಹಾಸಿರುತ್ತಿದ್ದರು. ಅದರ ಮೇಲೆ ನಾವು ರಾತ್ರಿ ನಿದ್ದೆ ಬರುವವರೆಗೂ, ಆಕಾಶ ನೋಡುತ್ತಾ, ನಕ್ಷತ್ರ ಎಣಿಸುತ್ತ, ಹರಟೆ ಹೊಡೆಯುತ್ತಾ, ಮಲಗುತ್ತಿದ್ದೆವು.

ಇದು ನಮ್ಮ ಬೇಸಿಗೆ ರಜೆಯಲ್ಲಿ ಅಜ್ಜಿ ಊರಿನ ಒಂದು ದಿನದ ದಿನಚರಿ.

**- ಟಿ ವಿ ಬಿ** ರಾಜನ್

## ವಾದ

ಬದುಕಿಗೊಂದು ಜವಾಬ್ದಾರಿ ಇದೆ, ಆ ಬದುಕನ್ನ ಬದುಕುವವರಿಗೂ ಕೂಡ. ನಾವೇನು ಮಾಡಬೇಕಾಗಿಲ್ಲ ನಾವು ನಮ್ಮ ಬದುಕನ್ನು ಎಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಬೇಕು ಅಂತ ಅಂದ್ರೆ ನಿನ್ನ ಜೊತೆಗಿದ್ದವರಿಗೆ ನೀನು ಅದೃಷ್ಟ ಅಂತನ್ನಿಸಬೇಕು ಕಳೆದುಕೊಂಡವರು ಛೇ ಇವನು ಜೊತೆಗಿರಬೇಕಿತ್ತು ಅಂತ ಪಶ್ಚಾತ್ತಾಪ ಪಡಬೇಕು. ಹಾಗಾದಾಗ ನಿನ್ನ ಬದುಕು ಅದ್ಭುತವಾಗಿದೆ ಮತ್ತು ಸರಿಯಾಗಿದೆ ಅಂತ ಅರ್ಥ. ಇಷ್ಟು ಮಾಡಿ ನೋಡು ಹೀಗಂತ ಮೋಟಿವೇಶನ್ ಕೊಡ್ತಾ ಇದ್ದ ಗೆಳೆಯ. ಆದರೆ ನನ್ನ ಬದುಕಿನ ಓಡಾಟದ ನಡುವೆ ಬದುಕಿದ್ರೆ ಸಾಕು ಅಂತ ಅನ್ನಿಸೋದಿಕ್ಕೆ ಆರಂಭವಾಗಿದೆ. ಯಾರಿಗೆ ಅದೃಷ್ಟವೋ ಯಾರಿಗೆ ಪಶ್ಚಾತ್ತಾಪವೋ ಇದಕ್ಕಿಂತ ನನ್ನೊಳಗಿನ ಮನಸ್ಸಿಗೆ ನೆಮ್ಮದಿ ಸಿಕ್ಕರೆ ಸಾಕಾಗಿದೆ. ನನ್ನ ಅಕ್ಕ ಪಕ್ಕ ನಿಂತಿರುವರು ನಗ್ತಾ ಇರಲಿ, ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳಾಗಲಿ ಸಾಲ ಮೋಸ ನೋವು ವ್ಯಥೆ ಎಲ್ಲವೂ ಆಗಾಗ ಬಂದು ಭೇಟಿಯಾಗುವ ಮೈಲಿಗಲ್ಲುಗಳಂತೆ. ತಲುಪುವ ದೂರವನ್ನ ಖಂಡಿತ ತಲುಪುತ್ತೇವೆ. ಸಾಗೋದಷ್ಟೇ ಬದುಕಿನ ಪಾಠ. ಈ ಎರಡು ವಾದದಲ್ಲಿ ನೀವು ಯಾವುದನ್ನು ಒಪ್ಕೋತೀರಿ, ಪ್ರಶ್ನೆ ನನ್ನ ಮುಂದೆ ಇಟ್ಟಿದ್ದ ಉತ್ತರಿಸುವ ಜವಾಬ್ದಾರಿ ನನ್ನದಾಗಿತ್ತು.

**- ಧೀರಜ್** ಬೆಳ್ಳಾರೆ



# ಯಾರ ಹಿತಾಸಕ್ತಿಗಾಗಿ ಬಿಡದಿ ಟೌನ್‌ಶಿಪ್ ಯೋಜನೆ

## ಸಿ.ಎಂ. ಶಿವಕುಮಾರ್‌ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಪ್ರಶ್ನೆ | ರೈತರಿಗೆ ಅನ್ಯಾಯವಾಗಲು ಬಿಡಲ್ಲ

• ಪ್ರಜೋದಯ ವರದಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಮೂಲಕ ಯಾರ ಹಿತದೃಷ್ಟಿ ಕಾಪಾಡಲು ಹೊರಟಿದ್ದಾರೆಂಬುದನ್ನು ಮೊದಲು ಸ್ಪಷ್ಟಪಡಿಸಲಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ರೈತರ ಜೊತೆ ಸಮಾಲೋಚನೆ ನಡೆಸದೆ, ಅವರ ಕಣ್ಣೀರಿನಲ್ಲಿ ನಿರ್ಮಾಣಗೊಳ್ಳುವ ಟೌನ್‌ಶಿಪ್, ಕಾಂಗ್ರೆಸ್ ಅಂತ್ಯಕ್ಕೆ ನಾಂದಿ ಹಾಡಲಿದೆ ಎಂದರು.

ನಿಮಗೆ ರೈತರ ಬಗ್ಗೆ ಕಳಕಳಿ ಇದೆಯಾ. ದಿನಾ ಬೆಳಗ್ಗೆ ಆದರೆ ಅಜ್ಜಯ್ಯನನ್ನು ಸ್ಮರಿಸಿಕೊಳ್ಳುತ್ತೀರಿ. ಅಜ್ಜಯ್ಯ ನಿಮಗೆ ಇನ್ನೂ ಕರುಣೆಯನ್ನು ತೋರಿಸಲಿಲ್ಲವೇ. ಯಾವ ರೀತಿ ಬದುಕಬೇಕು ಎನ್ನುವುದು ನಿಮಗಿನ್ನೂ ಗೊತ್ತಿಲ್ಲವೇ. ಅಜ್ಜಯ್ಯನ ರಕ್ಷಣೆ ನಿಮಗಿದೆ, ಅಜ್ಜಯ್ಯನ ಹೆಸರನ್ನು ಎಲ್ಲದಕ್ಕೂ ಬಳಸುತ್ತೀರಿ. ಅಜ್ಜಯ್ಯನವರು ಬಿಡದಿಯಲ್ಲಿ ಟೌನ್‌ಶಿಪ್ ಮಾಡಲು ಹೇಳಿದ್ದಾರಾ, ರೈತರನ್ನು ಒಕ್ಕಲೆಬ್ಬಿಸಲು ಹೇಳಿದ್ದಾರಾ ಎಂದು ಪ್ರಶ್ನಿಸಿದರು.

ರೈತರ ತೀವ್ರ ವಿರೋಧದ ನಡುವೆಯೂ ಬಿಡದಿ ಟೌನ್‌ಶಿಪ್ ಯೋಜನೆ ಭೂ ಸ್ವಾಧೀನಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿರುವ ನಡೆಯನ್ನು ಖಂಡಿಸಿದ ಕುಮಾರಸ್ವಾಮಿ, ಈ ರೈತ ದ್ರೋಹದ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ಹೇಳಿದ್ದಾರೆ. ರೈತರನ್ನು ನಾವೂ ಸಂಪರ್ಕಿಸಿದ್ದೇವೆ, ರಾಜಕಾರಣಿಗಳ ಸಹವಾಸವೇ ಬೇಡ ಎಂದಿದ್ದಾರೆ. ನಮ್ಮ ಪಾಡಿಗೆ ನಮ್ಮನ್ನು



ನೆಮ್ಮದಿಯಿಂದ ಇರಲು ಬಿಡಿ ಎಂದು ಹೇಳುತ್ತಿದ್ದಾರೆ. ಹಾಗಿದ್ದರೂ ಅದ್ಯಾವ ಪುರುಷಾರ್ಥಕ್ಕಾಗಿ ಬಿಡದಿ ಟೌನ್‌ಶಿಪ್ ಮಾಡಲು ಹೊರಟಿದ್ದೀರಿ ಎಂದು ಕಿಡಿಕಾರಿದರು.

**ಮುಖ್ಯಮಂತ್ರಿಗೆ ಕುಮಾರಸ್ವಾಮಿ ಸವಾಲು:**

ನಮ್ಮ ಅನ್ನದಾತರನ್ನು ರೈತರೇ ಅಲ್ಲ ಎನ್ನುವ ಅಹಂಕಾರವನ್ನು ಈ ಸರ್ಕಾರ ಪ್ರದರ್ಶಿಸುತ್ತಿದೆ. ಇದು, ಅನ್ನ ಕೊಡುವ ರೈತರಿಗೆ ಮಾಡುತ್ತಿರುವ ದೊಡ್ಡ ಅವಮಾನ. ಯಾರನ್ನು ರೈತರೇ ಅಲ್ಲ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೋ, ಅವರು ಆ ಗ್ರಾಮಗಳಿಗೆ ಬರಲಿ, ನಾನು ಕೂಡ ಅಲ್ಲಿಗೆ ಹೋಗುತ್ತೇನೆ. ಭೂಮಿಯನ್ನು ಕಳೆದುಕೊಳ್ಳುತ್ತಿರುವ ಆ ಜನರು, ರೈತರೋ ಅಲ್ಲವೋ ಎನ್ನುವುದು, ಹಳ್ಳಿಯಲ್ಲೇ ತೀರ್ಮಾನವಾಗಲಿ ಸವಾಲು ಹಾಕಿದರು.

**ಫಲವತ್ತಾದ ಕೃಷಿ ಭೂಮಿಗೆ ಕನ್ನ:**

ಸುಮಾರು 470 ದಿನಗಳಿಂದ ರೈತರು ಅಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಅಲ್ಲಿರುವುದು ಫಲವತ್ತಾದ ಕೃಷಿ ಭೂಮಿ. ಅದನ್ನು ಕಸಿದು ರಿಯಲ್ ಎಸ್ಟೇಟ್ ದಂಧೆ ಮಾಡಲು ಈ ಸರ್ಕಾರ ಹೊರಟಿದೆ. ಈಗ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದೆ. ಪ್ರತಿಭಟನೆ ಮಾಡುತ್ತಿರುವ ರೈತರ ಮೇಲೆ ಎಫ್‌ಐಆರ್ ಹಾಕಲಾಗುತ್ತಿದೆ. ಗೃಹ ಸಚಿವರು ನೋಡಿದರೆ ಯಾವುದೇ ಎಫ್‌ಐಆರ್ ಹಾಕಿಲ್ಲ ಎಂದು ಹೇಳುತ್ತಿದ್ದಾರೆ. ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ ಎಂದು ಕೇಂದ್ರ ಸಚಿವರು ವಿಷಾದ ವ್ಯಕ್ತ ಪಡಿಸಿದರು.

**ರೈತರ ಬದುಕಿಗೆ ಕೊಳ್ಳಿ:**

ಬಿಡದಿ ಟೌನ್‌ಶಿಪ್ ಎನ್ನುವ ರಿಯಲ್ ಎಸ್ಟೇಟ್ ದಂಧೆಯಲ್ಲಿ ಈ ಹಳ್ಳಿಗಳ ಜನರು ಮತ ಕೊಟ್ಟು ಗೆಲ್ಲಿಸಿದ ಜನಪ್ರತಿನಿಧಿಗಳು ಸೇರಿಕೊಂಡಿದ್ದಾರೆ ಎನ್ನುವುದು ನೋವಿನ ವಿಚಾರ. ಸರ್ಕಾರ ಏನೇ ಅಧಿಸೂಚನೆ ಹೊರಡಿಸಿದರೂ ಅದಕ್ಕೆ, ರೈತರ ಒಪ್ಪಿಗೆ ಕಡ್ಡಾಯವಾಗಿ ಬೇಕು. ಅವರ ಅನುಮತಿ ಇಲ್ಲದೆ ಸರ್ಕಾರದವರು ಏನನ್ನು ಮಾಡಲು ಆಗುವುದಿಲ್ಲ. ಇಷ್ಟಿದ್ದರೂ ಕೂಡ ಅಂತಿಮ ಅಧಿಸೂಚನೆ ಮಾಡಿ ರೈತರ ಬದುಕಿಗೆ ಕೊಳ್ಳಿ ಇಡಲು ಸರ್ಕಾರ ಮುಂದಾಗಿರುವುದು ಅಕ್ಷಮ್ಯ ಅಪರಾಧ ಎಂದು ಕುಮಾರಸ್ವಾಮಿ ಅವರು ಎಚ್ಚರಿಸಿದ್ದಾರೆ.

## ಛಾಯಾಚಿತ್ರ ಗ್ರಾಹಕ ಸಂಘದ ಸದಸ್ಯರಿಗೆ ಪರಿಹಾರ ನಿಧಿ



• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕು ಛಾಯಾಚಿತ್ರ ಗ್ರಾಹಕ ಸಂಘದ ಸದಸ್ಯರಿಗೆ ಆಕಾಲಿಕ ಮೃತ್ಯುವಾದ ನಂತರದಲ್ಲಿ ಪರಿಹಾರ ನಿಧಿ ಸ್ಥಾಪಿಸುವ ಮಹತ್ತರ ಯೋಜನೆಗೆ ಜಿಲ್ಲಾಧ್ಯಕ್ಷ ಸ್ವಾಮಿ ಚಾಲನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರ ಬಳಿ ಸಭೆ ನಡೆಸಿ ಮಾತನಾಡಿದ ಅವರು, ಛಾಯಾಚಿತ್ರ ಗ್ರಾಹಕರಿಗೆ ನೊಂದಾಯಿತ ಸಂಘದಡಿ ಸದಸ್ಯತ್ವ ನೀಡಲಾಗುವುದು. ನೊಂದಾಯಿಸಿಕೊಂಡ ಸದಸ್ಯರು ಮರಣ ಹೊಂದಿದ ನಂತರ ಆಸರೆ ಯೋಜನೆಯಡಿ ಆರ್ಥಿಕವಾಗಿ ಮೃತ ಸದಸ್ಯನ ಕುಟುಂಬಕ್ಕೆ ಪರಿಹಾರವಾಗಿ ಪ್ರಸ್ತುತ 1 ಲಕ್ಷ ರೂ. ಪರಿಹಾರ ಮೊತ್ತ ದೊರಕಿಸಿಕೊಡಲಾಗುವುದು ಎಂದು ಅವರು ಮಾಹಿತಿ ನೀಡಿದರಲ್ಲದೆ, ಸಂಘದ ಸದಸ್ಯರೇ ಪ್ರತಿ ತಿಂಗಳು ನೀಡುವ ದೇಣಿಗೆಯಲ್ಲಿ ಪರಿಹಾರ ನಿಧಿ ಸ್ಥಾಪಿಸಲಾಗಿದೆ. ನಂತರದಲ್ಲಿ ಇದರ ಮೊತ್ತ ಹೆಚ್ಚಳವಾಗುವ ವಿಶ್ವಾಸ ಇದೆ ಎಂದು ತಿಳಿಸಿದರು.

ಕೆಪಿಎ ಯೋಜನೆಯ ಜಿಲ್ಲಾಧ್ಯಕ್ಷ ಲೋಕೇಶ್, ಜಿಲ್ಲಾ ಕಾರ್ಯದರ್ಶಿ ಧನ್ಯಕುಮಾರ್, ರಾಜ್ಯ ಸಂಘದ ನಿರ್ದೇಶಕ ಕೊನೇರಿ ಸೂರಿ, ಅಭಿಲಾಷ್, ವಿನಾಯಕ, ನರಸಿಂಹ ಹಾಗೂ ಪ್ರಮೋದ್ ಹಾಜರಿದ್ದರು.


## ಮರಿ ಕಾಡಾನೆ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ

• ಪ್ರಜೋದಯ ವರದಿ

**ಬೇಲೂರು:** ತಾಲೂಕಿನ ಅರೇಹಳ್ಳಿ ಹೋಬಳಿ ವ್ಯಾಪ್ತಿಯ ಕುಂಬಾರಳ್ಳಿ ಗ್ರಾಮದಲ್ಲಿ ಕಾಡಾನೆಗಳ ಗುಂಪಿನಿಂದ ಬೇರ್ಪಟ್ಟ ಒಂಟಿ ಮರಿ ಕಾಡಾನೆಯೊಂದು ಗ್ರಾಮಕ್ಕೆ ನುಗ್ಗಿದ ಘಟನೆ ನಡೆದಿದೆ. ಮರಿ ಆನೆಯ ಅಚಾನಕ್ ಆಗಮನದಿಂದ ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಕಳೆದ ಕೆಲವು ದಿನಗಳಿಂದ ಈ ಭಾಗದಲ್ಲಿ ಕಾಡಾನೆಗಳ ಸಂಚಾರ ಹೆಚ್ಚಾಗಿದ್ದು, ಆನೆಗಳ ಹಿಂಡಿನೊಂದಿಗೆ ಸಂಚರಿಸುತ್ತಿದ್ದ ಮರಿ ಆನೆಯು ಯಾವುದೋ ಕಾರಣದಿಂದ ಗುಂಪಿನಿಂದ ಬೇರ್ಪಟ್ಟಿದೆ ಎನ್ನಲಾಗಿದೆ. ದಾರಿ ತಪ್ಪಿದ ಮರಿ ಆನೆಯು ಕುಂಬಾರಳ್ಳಿ ಗ್ರಾಮದ ಜನವಸತಿ ಪ್ರದೇಶ ಹಾಗೂ ಸುತ್ತಮುತ್ತಲಿನ ತೋಟ ಮತ್ತು ಜಮೀನುಗಳ ನಡುವೆ ಓಡಾಡಿದೆ.

ಮರಿ ಆನೆ ಗ್ರಾಮದಲ್ಲಿ ಸಂಚರಿಸುತ್ತಿರುವುದನ್ನು ಗಮನಿಸಿದ ಸ್ಥಳೀಯರು ಆತಂಕಗೊಂಡು ತಕ್ಷಣ ಅರಣ್ಯ ಇಲಾಖೆ ಅಧಿಕಾರಿ



ಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿ, ಗ್ರಾಮಸ್ಥರ ಸಹಕಾರದೊಂದಿಗೆ ಮರಿ ಆನೆಯನ್ನು ಸುರಕ್ಷಿತವಾಗಿ ಕಾಡಿನತ್ತ ಕಳುಹಿಸಲು ಹಾಗೂ ಅದರ ಹಿಂಡಿನೊಂದಿಗೆ ಸೇರಿಸಲು ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಈ ಭಾಗದಲ್ಲಿ ನಿರಂತರವಾಗಿ ಕಾಡಾನೆಗಳ ಓಡಾಟ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ರೈತರು ಹಾಗೂ ಗ್ರಾಮಸ್ಥರ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕು

• ಪ್ರಜೋದಯ ವರದಿ

**ಆಲೂರು:** ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಛಲವನ್ನು ವಿದ್ಯಾರ್ಥಿಗಳು ಹೊಂದಬೇಕು ಎಂದು ಸಿ.ಎಸ್.ಸಿ. ಪ್ರಾದೇಶಿಕ ನಿರ್ದೇಶಕ ಜಯಂತ್ ಪೂಜಾರಿ ಕಿವಿಮಾತು ಹೇಳಿದರು.

ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ ಆಲೂರು, ಸಕಲೇಶಪುರ, ಬೇಲೂರು ಸಿ.ಎಸ್.ಸಿ. ಸೇವಾ ಕೇಂದ್ರದ ಮಾಸಿಕ ಸಭೆಯಲ್ಲಿ ಭಾಗವಹಿಸಿ, 01 ನೆ ತರಗತಿಯಿಂದ 12 ನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಆನ್ ಲೈನ್ ಮೂಲಕ ಒಲಂಪಿಯಾಡ್ ಪರೀಕ್ಷೆಯಲ್ಲಿ ಶೇ. 90 ರಷ್ಟು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ



ಯೋಜನೆಯ ಸಿ.ಎಸ್.ಸಿ. ಕೇಂದ್ರದ ಮೂಲಕ ಸರ್ಕಾರನ ಅನೇಕ ಯೋಜನೆ ಮತ್ತು ಕಾರ್ಯಕ್ರಮಗಳನ್ನು ನೇರವಾಗಿ ಅತ್ಯಂತ ಪಾರದರ್ಶಕ ವ್ಯವಸ್ಥೆಯಲ್ಲಿ ಉಚಿತ ಮತ್ತು ನಿಗದಿತ ಸರ್ಕಾರಿ ದರದಲ್ಲಿ ಸೇವೆಗಳನ್ನು ಜನಸಾಮಾನ್ಯರಿಗೆ ಒದಗಿಸಲಾಗುತ್ತಿದೆ. ಇದರ ಜೊತೆಗೆ ಸೇವಾ ಕೇಂದ್ರಗಳಲ್ಲಿ ಡಿಜಿಪೇ ಅನುಷ್ಠಾನಮಾಡಿದ್ದು ಡಿಜಿ ಪೇ ಮೂಲಕ ಗ್ರಾಹಕರು ಎಟಿಎಂ ಕಾರ್ಡ್ ಸ್ವೈಪ್ ಮಾಡಿಕೊಂಡು ನಗದು ಹಣ ಪಡೆಯುವ ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಭಾರತ ಸರ್ಕಾರದ ಐಟಿ ಸಚಿವಾಲಯದಿಂದ ಸಿ.ಎಸ್.ಸಿ. ಈ ಗವರ್ನೆಸ್ ಮೂಲಕ ನಡೆಸಲ್ಪಡುವ 3 ರಿಂದ 12 ನೇ ತರಗತಿ ವಿದ್ಯಾರ್ಥಿಗಳಿಗೆ, ಆಯ್ದ ಹಿಂದಿ, ಇಂಗ್ಲೀಷ್, ಗಣಿತ, ವಿಜ್ಞಾನ ಹಾಗೂ ಶೈಕ್ಷಣಿಕ ಮತ್ತು ಕೌಶಲ್ಯ ವಿಷಯಗಳಂತಹ ಇತರ ವಿಷಯಗಳಿಗೆ ಸಂಬಂಧಿಸಿದ ಸ್ಪರ್ಧಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸಲು ಸಿ.ಎಸ್.ಸಿ. ಒಲಂಪಿಯಾಡ್ ಪರೀಕ್ಷೆಯನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದು ಅವರು ತಿಳಿಸಿದರು.

ಈ ಪರೀಕ್ಷೆ ಕೇವಲ ಶಾಲಾ ಪಠ್ಯಕ್ರಮಕ್ಕೆ ಸೀಮಿತವಾಗದೆ, ವಿದ್ಯಾರ್ಥಿಗಳ ಆಳವಾದ ಜ್ಞಾನ ಬುದ್ದಿವಂತಿಕೆಯನ್ನು ಚುರುಕುಗೊಳಿಸುವ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಹಾಗೂ ಹೆಚ್ಚಿನ ಆಸಕ್ತಿ ಇರುವ ವಿಷಯವನ್ನು ಮತ್ತು ಅವರ ಪ್ರತಿಭೆ ಗುರುತಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಹಾಸನ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್, ಎಂ.ಐ.ಎಸ್. ಯೋಜನಾಧಿಕಾರಿ ರಾಮಣ್ಣ, ಕ್ಷೇತ್ರ ಯೋಜನಾಧಿಕಾರಿ ರತ್ನಾಕರ್ ಕೊಠಾರಿ, ಸಿ.ಎಸ್.ಸಿ. ಯೋಜನಾಧಿಕಾರಿ ಸೋಮಶೇಖರ್, ತಾಲ್ಲೂಕು ನೋಡಲ್‌ಗಳಾದ ಪ್ರದೀಪ್ ಓಂಕಾರ, ಜಯಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

## ಭಾರತೀಯ ಸೇನಾ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಧೀರಜ್ ಸೇಠ್ ನೇಮಕ

**ನವದೆಹಲಿ:** ಭಾರತೀಯ ಸೇನೆಯ ನೂತನ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರನ್ನು ನೇಮಿಸಲಾಗಿದೆ. ಭಾರತ ಸರ್ಕಾರದ ರಕ್ಷಣಾ ಸಚಿವಾಲಯವು ಸೇನೆಯ ಅತ್ಯಂತ ಹಿರಿಯ ಮತ್ತು ಅನುಭವಿ ಅಧಿಕಾರಿಯಾದ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರನ್ನು ಮುಂದಿನ ಸೇನಾ ಮುಖ್ಯಸ್ಥರನ್ನಾಗಿ ಆಯ್ಕೆ ಮಾಡಿದೆ.

ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರು ಭಾರತೀಯ ಸೇನೆಯಲ್ಲಿ ಅತ್ಯಂತ ಸುದೀರ್ಘ ಅನುಭವ ಹೊಂದಿರುವ ಅಧಿಕಾರಿಯಾಗಿದ್ದಾರೆ.

ನೂತನ ಸೇನಾ ಮುಖ್ಯಸ್ಥರಾಗಿ ನೇಮಕಗೊಳ್ಳುವ ಮುನ್ನ ಅವರು ಭಾರತೀಯ ಸೇನೆಯ ಅತ್ಯಂತ ಪ್ರಮುಖ ಕಮಾಂಡ್ ಆಯಕಟ್ಟಿನ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

## ಮತ್ಸ್ಯಸಂಪದ ಯೋಜನೆ: ಅರ್ಜಿ ಆಹ್ವಾನ

**ಹಾಸನ:** ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆ ವತಿಯಿಂದ 2026-27 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ 0.1 ಹೆಕ್ಟೇರ್ Biofloc Ponds for Fresh-water (ಬಯೋಪ್ಲಾಕ್ ಘಟಕ) ಮಹಿಳೆ, ಟಿಟಚಿಣಿಜ ಛಿಟ (ಶಾಖ ನಿರೋಧಕ ಇ-) ಸಾಮಾನ್ಯ, ತ್ರಿಚಕ್ರ ವಾಹನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ 40 ರಷ್ಟು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚ ಶೇಕಡ 60 ರಷ್ಟು ಸಹಾಯಧನ ನೀಡಲಾಗುತ್ತಿದ್ದು ಹಾಗೂ ಪರಿಸರ ಸ್ನೇಹಿ ಸುಸಜ್ಜಿತ ಕಿಯೋಸ್ಕ್ ಅಳವಡಿಸಲಾದ ಮತ್ಸ್ಯವಾಹಿನಿ ಯೋಜನೆಯ ಇ-ತ್ರಿಚಕ್ರ ವಾಹನಗಳಲ್ಲಿ ತಾಜಾ ಮೀನು ಮತ್ತು ಮೀನು ಉತ್ಪನ್ನಗಳ ಮಾರಾಟಕ್ಕಾಗಿ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ವರ್ಗದ ಪರವಾನಗಿದಾರರಿಗೆ ಪ್ರಾರಂಭಿಕ ಭದ್ರತಾ ಠೇವಣಿ 1 ಲಕ್ಷ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಮಹಿಳಾ ವರ್ಗದ ಪರವಾನಗಿದಾರರಿಗೆ ಭದ್ರತಾ ಠೇವಣಿ 50 ಸಾವಿರ ರೂಗಳನ್ನು ನಿಗದಿಪಡಿಸಲಾಗಿದೆ, ಜೂ.20 ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ತಾಲ್ಲೂಕು ಮಟ್ಟದ ಕಚೇರಿಗಳಿಗೆ ಸಲ್ಲಿಸಬಹುದಾಗಿದೆ ಎಂದು ಮೀನುಗಾರಿಕಾ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಕೆ.ಎಂ.ಶಿವಲಿಂಗೇಗೌಡರಿಗೆ ಮಂತ್ರಿ ಸ್ಥಾನ ದೊರೆಯಲಿ

• ಪ್ರಜೋದಯ ವರದಿ

**ಅರಸೀಕೆರೆ:** ಸತತ ನಾಲ್ಕು ಬಾರಿ ಕ್ಷೇತ್ರದ ಶಾಸಕರಾಗಿ ದಾಖಲೆ ಮತದಿಂದ ಆಯ್ಕೆಯಾಗಿರುವ ಶಾಸಕ ಕೆ.ಎಂ.ಶಿವಲಿಂಗೇಗೌಡರಿಗೆ ಮಂತ್ರಿ ಸ್ಥಾನ ದೊರೆಯಲಿ ಎಂದು ತಾಲೂಕು ಕಾಡುಗೊಲ್ಲ ಯಾದವ ಸಮಾಜದ ಮುಖಂಡರು ಸುಕ್ಷೇತ್ರ ಮಾಲೆ ಕಲ್ಲು ಅಮರಗಿರಿ ತಿರುಪತಿಯಲ್ಲಿ ನೆಲೆಸಿರುವ ಶ್ರೀ ಲಕ್ಷ್ಮಿ ವೆಂಕಟರಮಣ ಸ್ವಾಮಿಗೆ ಪೂಜೆ ಸಲ್ಲಿಸಿದ್ದಾರೆ.

ಸಮಾಜದ ಮುಖಂಡರಾದ ಕಾಡುಗೊಲ್ಲ ಯಾದವ ಸಮಾಜದ ಅಧ್ಯಕ್ಷ ಬೆಂಡೆಕೆರೆ ಅಜ್ಜಪ್ಪ ಹಾಗೂ ಕಾಡುಗೊಲ್ಲ ಯಾದವರ ಸಂಘದ ರಾಜ್ಯ ಯುವ ಘಟಕದ ಅಧ್ಯಕ್ಷ ಪ್ರಭು ಅವರ ನೇತೃತ್ವದಲ್ಲಿ ತಿರುಪತಿ ತಿಮ್ಮಪ್ಪನ ಸನ್ನಿಧಾನಕ್ಕೆ ಆಗಮಿಸಿದ ಯಾದವ ಸಮಾಜದ ನೂರಾರು



ಬಂದುಗಳು ವೆಂಕಟರಮಣ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ದೇವಾಲಯದ ಮುಖ್ಯ ದ್ವಾರದಲ್ಲಿ ನೂರಾರು ಈಡುಗಾಯಿ ಹೊಡೆಯುವ ಮೂಲಕ ಶಿವಲಿಂಗೇಗೌಡರಿಗೆ ನೂತನ ಸರ್ಕಾರದಲ್ಲಿ ಮಂತ್ರಿ ಸ್ಥಾನ ದೊರೆಯಲಿ ಎಂದು ದೇವರಲ್ಲಿ ಮೊರೆ ಇಟ್ಟರು.

ಈ ಸಂದರ್ಭದಲ್ಲಿ ಅಜ್ಜಪ್ಪ ಮಾತನಾಡಿ, ಶಿವಲಿಂಗೇಗೌಡರಲ್ಲಿರುವ ಜಲಪರ ಚಿಂತನೆ ಅವರ ನಾಯಕತ್ವದ ಗುಣ ಇತರರಿಗೆ ಮಾದರಿಯಾಗಿದ್ದು ಈಗಾಗಲೇ ಅರಸೀಕೆರೆ ವಿಧಾನಸಭಾ ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಿದ್ದು ಅದೇ ರೀತಿ ಅವರಿಗೆ ಸಚಿವ ಸ್ಥಾನ ಮಾನ ಸಿಕ್ಕಿದ್ದೆ ಆದರೆ ರಾಜ್ಯದ ಅಭಿವೃದ್ಧಿಗೆ ಅವರದ್ದೆಯಾದ ರೀತಿಯಲ್ಲಿ ವಿಶಿಷ್ಟ ಕೊಡುಗೆ ನೀಡುವುದರಲ್ಲಿ ಸಂದೇಹವಿಲ್ಲ ಇದರಿಂದ ಪಕ್ಷದ ಬಲವರ್ಧನೆಗೂ ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಭು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದಲ್ಲಿ ಶಿವಲಿಂಗೇಗೌಡರು ಇರುತ್ತಾರೆ ಎಂಬುದು ಕ್ಷೇತ್ರದ ಜನತೆಯ ಆಸೆಯಾಗಿತ್ತು ಆದರೆ ಶಿವಲಿಂಗೇಗೌಡರಿಗೆ ಎರಡನೇ ಅವಧಿಯಲ್ಲಿ ಮಂತ್ರಿ ಮಾಡುವುದಾಗಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಪ್ರಸ್ತುತ ಮುಖ್ಯಮಂತ್ರಿಗಳಾಗಿರುವ ಡಿಕೆ ಶಿವಕುಮಾರ್ ಅವರು ಭರವಸೆ ನೀಡಿದ್ದರು ಈಗ ಅದನ್ನು ಈಡೇರಿಸುವ ಮೂಲಕ ಕ್ಷೇತ್ರದ ಜನತೆಯ ದಶಕಗಳ ಬೇಡಿಕೆಯನ್ನು ಈಡೇರಿಸಲಿ ಎಂದು ಮನವಿ ಮಾಡಿದರು.

ಕಾಡುಗೊಲ್ಲ ಯಾದವ ಸಮಾಜದ ಕಾರ್ಯದರ್ಶಿ ಮಲ್ಲಪ್ಪ, ಮುಖಂಡರಾದ ರಂಗಪ್ಪ, ತಿಮ್ಮಪ್ಪ, ವಸಂತ, ಪರಮೇಶಪ್ಪ, ಕಾಂತರಾಜು, ಮಾಡಾಳು ಪಾಪಣ್ಣ ಇನ್ನಿತರರು ಉಪಸ್ಥಿತರಿದ್ದರು.

## ಜುಲೈ 20 ರಂದು 'ನಿಮ್ಮ ಆಹಾರವೇ ಔಷಧಿ'

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ, ನಿಮ್ಮ ಅಡುಗೆ ಮನೆಯಲ್ಲಿದೆ ನಿಮ್ಮ ಆರೋಗ್ಯ. ನೀವು ಸೇವಿಸುವ ಆಹಾರದಲ್ಲಿದೆ ನಿಮ್ಮ ಉತ್ತಮವಾದ ಆರೋಗ್ಯದ ಗುಟ್ಟು ಎಂಬುದಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಜುಲೈ 20ರ ಶನಿವಾರದಂದು ಪಟ್ಟಣದಲ್ಲಿ ಅಯೋಜಿಸಿರುವುದಾಗಿ ಕತ್ತರಿಘಟ್ಟ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದ ಚಂದ್ರಶೇಖರ್ ಗುರೂಜಿ ತಿಳಿಸಿದರು.

ಪಟ್ಟಣದಲ್ಲಿ ಆಯೋಜಿಸಿರುವ ವಿಶೇಷ ಉಪನ್ಯಾಸದ ಕುರಿತಾಗಿ ತಮ್ಮ ಆಧ್ಯಾತ್ಮಿಕ ಕೇಂದ್ರದಲ್ಲಿ ಮಾಧ್ಯಮಕ್ಕೆ ಮಾಹಿತಿ ನೀಡಿದ ಗುರೂಜಿಯವರು, ಮಿರಾಕಲ್ ಡ್ರಿಂಕ್ಸ್ ಎಂ.ರಾಜು ಎಂದೇ ಖ್ಯಾತಿ ಗಳಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಎಂ.ಎಸ್.ರಾಜುರವರು ಕ್ಯಾನ್ಸರ್, ಮಧುಮೇಹ, ರಕ್ತದೊತ್ತಡ ಮತ್ತು ಹೃದಯ ಸ್ಥಂಭನದಂತಹ ಗಂಭೀರ ಕಾಯಿಲೆಗಳನ್ನು ಸರಳ ಆಹಾರ ಸೇವನೆ ಮೂಲಕ ದೂರವಿಡುವ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಜುಲೈ 20 ರಂದು ಕೆಂಬಾಳು ಸಮಿತ್ರಾ ಪ್ರಕಾಶ್ ಕನ್ವೇಷನಲ್ ಹಾಲ್‌ನಲ್ಲಿ ಬೆಳಿಗ್ಗೆ 10.30 ರಿಂದ 12 ಘಂಟೆವರೆಗೂ ನಡೆಸಿಕೊಡಲಿದ್ದು, ತಾಲ್ಲೂಕಿನ ಜನತೆ ಇದರ ಸದುಪಯೋಗಕ್ಕೆ ಮುಂದಾಗಿ ಉತ್ತಮ ಅರೋಗ್ಯ ಪಡೆಯುವಂತೆ ಮನವಿ ಮಾಡಿದರು.

ಆಸ್ಪತ್ರೆಗಳಿಂದಲೂ ಗುಣವಾಗದ ರೋಗವನ್ನು ಎಂ.ಎಸ್.ರಾಜು ಅವರು ಗುಣಪಡಿಸಿದ್ದಾರೆ. ಇಂತಹ ವ್ಯಕ್ತಿಯಿಂದ ನಮ್ಮ ತಾಲ್ಲೂಕಿನ ಜನತೆಗೆ ಅನುಕೂಲವಾಗಲೆಂದು ಮೆಳಿಯಮ್ಮ ಚಾರಿಟಬಲ್ ಟ್ರಸ್ಟ್‌ನ ಕಾರ್ಯದರ್ಶಿ ಅಮೋಘ್ ಅವರು ಕಾರ್ಯಕ್ರಮ ಅಯೋಜಿಸಿದ್ದಾರೆದರು.

## ಕನ್ನಿಕಾ ಪರಮೇಶ್ವರಿ ದೇವಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಬೇಲೂರು:** ಜೇಷ್ಠ ಅಧಿಕಮಾಸದ ಅಂಗವಾಗಿ ಪಟ್ಟಣದ ಕೋಟೆ ಶ್ರೀ ಕನ್ನಿಕಾ ಪರಮೇಶ್ವರಿ ದೇವಾಲಯದಲ್ಲಿ ಆರ್ಯವೈಶ್ಯ ಮಂಡಳಿಯ ವತಿಯಿಂದ ಅಷ್ಟಲಕ್ಷ್ಮಿ ಪೂಜೆಯನ್ನು ಭಕ್ತಿ, ಶ್ರದ್ಧೆ ಹಾಗೂ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇರಿಸಲಾಯಿತು.

ದೇವಾಲಯವನ್ನು ವಿವಿಧ ಬಗೆಯ ಹೂವುಗಳು, ಮಾವಿನ ತೋರಣಗಳು, ಬಣ್ಣಬಣ್ಣದ ದೀಪಗಳು ಹಾಗು ಸಾಂಪ್ರದಾಯಿಕ ಅಲಂಕಾರಗಳಿಂದ ಸಿಂಗರಿಸಲಾಗಿತ್ತು. ಕನ್ನಿಕಾ ಪರಮೇಶ್ವರಿ ಅಮ್ಮನವರಿಗೆ ವಿಶೇಷ ಪುಷ್ಪಾಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಆರ್ಯವೈಶ್ಯ ಮಂಡಳಿಯ ಅಧ್ಯಕ್ಷ ಕೃಷ್ಣ ಶೆಟ್ಟಿ ಅವರು ಮಾತನಾಡಿ, ಅಷ್ಟಲಕ್ಷ್ಮಿಯ ಎಂಟು ಸ್ವರೂಪಗಳ



ಪ್ರತೀಕವಾಗಿ ವಿಶೇಷ ಕಲಶಗಳನ್ನು ಪ್ರತಿಷ್ಠಾಪಿಸಿ ಪೂಜೆ ನೆರವೇರಿಸಲಾಗುತ್ತಿದೆ. ಆದಿಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಗಜಲಕ್ಷ್ಮಿ, ಸಂತಾನಲಕ್ಷ್ಮಿ, ವಿಜಯಲಕ್ಷ್ಮಿ, ವಿದ್ಯಾಲಕ್ಷ್ಮಿ ಹಾಗು ಧೈರ್ಯಲಕ್ಷ್ಮಿ ದೇವಿಯರಿಗೆ ವಿಶೇಷ ಅರ್ಚನೆ, ಕುಂಕುಮಾರ್ಚನೆ ಹಾಗು ಅಷ್ಟೋತ್ತರ ಶತನಾಮಾವಳಿ ಪಾರಾಯಣ ನಡೆಸಲಾಯಿತು ಎಂದು ತಿಳಿಸಿದರು.

ದೇವಾಲಯದ ಪ್ರಮುಖರಾದ ಭಾಗ್ಯ ಕೃಷ್ಣಕುಮಾರ್, ಹೇಮಾ ಕೃಷ್ಣ, ನಾಗೇಂದ್ರ ಪ್ರಸಾದ್, ಶುಭಾ, ರಂಗನಾಥ್ ಗುಪ್ತ, ರಂಗಲಕ್ಷ್ಮಿ, ಆರ್ಯವೈಶ್ಯ ಮಂಡಳಿಯ ಅಧ್ಯಕ್ಷ ಪಟ್ಟಾಭಿರಾಮನ್ ಸೇರಿ ಆರ್ಯವೈಶ್ಯ ಸಮುದಾಯದ ಭಕ್ತರು ಇದ್ದರು.

## ಸಂಘ ಸಂಸ್ಥೆಗಳ ನೋಂದಣಿ ನವೀಕರಣ

**ಹಾಸನ:** ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರಡಿ ನೋಂದಣಿಯಾದ ಪ್ರತಿಯೊಂದು ಸಂಘವು ನವೀಕರಣಗೊಳ್ಳಬೇಕಾಗಿರುತ್ತದೆ. ಕಲಂ 13 ರಂತೆ ಅನೇಕ ಸಂಘ ಸಂಸ್ಥೆಗಳು 05 ವರ್ಷಗಳಿಗೂ ಮೇಲ್ಪಟ್ಟು ನವೀಕರಿಸದೇ ಫೈಲಿಂಗ್ ಮಾಡದೇ ಇರುವ ಸಂಘ ಸಂಸ್ಥೆಗಳ ಸದಸ್ಯರ ಹಿತದೃಷ್ಟಿಯಿಂದ ದಂಡ ವಿಧಿಸಿ ನವೀಕರಿಸಲು ಫೈಲಿಂಗ್ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ-3 ಸಹಕಾರ ಇಲಾಖೆ ಅನುಮತಿಯನ್ನು ನೀಡಲಾಗಿರುತ್ತದೆ.

5 ವರ್ಷಗಳಿಗೆ ಮೇಲ್ಪಟ್ಟು ಫೈಲಿಂಗ್ ಮಾಡಿಕೊಳ್ಳದೇ ಬಾಕಿ ಇರುವ ಸಂಘ ಸಂಸ್ಥೆಗಳು ಪ್ರತಿ ವರ್ಷಕ್ಕೆ ರೂ. 3000.00 ಹೆಚ್ಚುವರಿ ದಂಡ ಪಾವತಿಸಿ ಫೈಲಿಂಗ್ ಮಾಡಿಕೊಳ್ಳತಕ್ಕದ್ದು. ಈ ಅವಕಾಶವು ಡಿ.31 ರ ಅಂತ್ಯದವರೆಗೆ ಜಾರಿಯಲ್ಲಿರುತ್ತದೆ.

5 ವರ್ಷಗಳಿಗೆ ಮೇಲ್ಪಟ್ಟು ಬಂದ ಸಂಘ ಸಂಸ್ಥೆಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ, ಎಲ್ಲಾ ದಾಖಲಾತಿಗಳನ್ನು ಮುದ್ದಾಂ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಕಚೇರಿಗೆ ಸಲ್ಲಿಸಬೇಕು.

ಜಿಲ್ಲೆಯಲ್ಲಿ ನೋಂದಣಿಯಾಗಿರುವ ಸೊಸೈಟಿಗಳು, ಸಂಘ- ಸಂಸ್ಥೆಗಳು ಮೇಲ್ಕಂಡ ಷರತ್ತುಗಳ ಆಧಾರದ ಅನುಸಾರ ಸದುಪಯೋಗಪಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯ ದೂರವಾಣಿ ಸಂಖ್ಯೆ: 08172-268455 ಗೆ ಸಂಪರ್ಕಿಸಬಹುದಾಗಿದೆ ಎಂದು ಸಹಕಾರ ಸಂಘಗಳ ಉಪ ನಿಬಂಧಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಹುಬೆಳೆ ಪದ್ಧತಿ ಅಳವಡಿಸಿಕೊಳ್ಳಲು ಸಲಹೆ

• ಪ್ರಜೋದಯ ವರದಿ

**ಜಾವಗಲ್:** ರೈತರು ತಾಂತ್ರಿಕ ಮಾಹಿತಿ ಪಡೆದು ಏಕಬೆಳೆ ಪದ್ಧತಿಗೆ ಬದಲಾಗಿ ಬಹುಬೆಳೆ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಕೃಷಿಯಲ್ಲಿ ಹೆಚ್ಚಿನ ಲಾಭ ಗಳಿಸಬೇಕು ಎಂದು ತಾಲ್ಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎ.ಪಿ. ಶಿವಕುಮಾರ್ ಅವರು ಸಲಹೆ ನೀಡಿದರು.

ಹೋಬಳಿ ರೈತ ಸಂಪರ್ಕ ಕೇಂದ್ರದ ವತಿಯಿಂದ ಗ್ರಾಮದ ಕೃಷಿಕ ಅಮ್ಮನಹಳ್ಳಿ ಸುರೇಶ್ ಅವರ ಜಮೀನಿನಲ್ಲಿ ಆಯೋಜಿಸಿದ್ದ ಸಮತೋಲಿತ ರಸಗೊಬ್ಬರ ಬಳಕೆ ಹಾಗು ಮೆಕ್ಕೆಜೋಳದ ಬಿಳಿ ಸುಳಿ ರೋಗ ನಿರ್ವಹಣೆ ಕುರಿತ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೈತರು ಯೂರಿಯಾ ಮತ್ತು ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆಯನ್ನು ಕಡಿಮೆ



ಮಾಡಿ, ಮಣ್ಣು ಪರೀಕ್ಷೆ ಮಾಡಿಸಿಕೊಂಡು ಭೂಮಿಯ ಅಗತ್ಯಕ್ಕೆ ಅನುಗುಣವಾಗಿ ಪೋಷಕಾಂಶಗಳನ್ನು ಬಳಸಬೇಕು. ಜೊತೆಗೆ ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ ಹಾಗೂ ಹಸಿರೆಲೆ ಗೊಬ್ಬರ ಬಳಕೆಯ ಮೂಲಕ ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಮೆಕ್ಕೆಜೋಳದಲ್ಲಿ ಕಾಣಿಸಿಕೊಳ್ಳುವ ಬಿಳಿ ಸುಳಿ ರೋಗದ ಲಕ್ಷಣಗಳು, ಪರಿಣಾಮಗಳು ಹಾಗು ಹತೋಟಿ ಕ್ರಮಗಳ ಕುರಿತು ಮಾಹಿತಿ ನೀಡಿದ ಅವರು, ರೋಗ ಕಾಣಿಸಿಕೊಂಡ 15 ರಿಂದ 20 ದಿನಗಳೊಳಗೆ ಸೂಕ್ತ ಔಷಧ ಸಿಂಪಡಿಸುವ ಮೂಲಕ ನಿಯಂತ್ರಿಸಬಹುದು ಎಂದು ತಿಳಿಸಿದರು.

ಕೃಷಿ ಅಧಿಕಾರಿ ಡಿ.ಜೆ. ಸುಬ್ರಮಣ್ಯ, ಕೃಷಿಕ ಅಮ್ಮನಹಳ್ಳಿ ಸುರೇಶ್ ಹಾಗು ಸುತ್ತಮುತ್ತಲಿನ ರೈತರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು.

## ಜೂ.28 ರಂದು ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ

**ಬೆಂಗಳೂರು:** ರಾಜ್ಯದಲ್ಲಿ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ನೀಡುವ ಉದ್ದೇಶದಿಂದ 2026 ರ ಜೂನ್ 28 ರ ಭಾನುವಾರದಂದು 'ರಾಷ್ಟ್ರೀಯ ಲಸಿಕಾ ದಿನ (ಪಲ್ಸ್ ಪೋಲಿಯೋ)' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ರಿತ್ವಿಕ್ ಪಾಂಡೆ ಅವರು ತಿಳಿಸಿದ್ದಾರೆ.

ಭಾರತವು ಕಳೆದ 14 ವರ್ಷಗಳಿಗೂ ಮೇಲ್ಪಟ್ಟು ಪೋಲಿಯೊ ಮುಕ್ತ ರಾಷ್ಟ್ರವಾಗಿದ್ದರೂ, ಜಗತ್ತಿನ ಕೆಲವು ಭಾಗಗಳಲ್ಲಿ ಹಾಗೂ ಭಾರತದ ನೆರೆ ರಾಷ್ಟ್ರಗಳಲ್ಲಿ ವೈಲ್ಡ್ ಪೋಲಿಯೋ ವೈರಸ್ (og o Xw) ಹರಡುವಿಕೆ ಇನ್ನೂ ಇರುವುದರಿಂದ ಈ ಮುನ್ನೆಚ್ಚರಿಕೆ ಕ್ರಮ ಅತ್ಯಗತ್ಯವಾಗಿದೆ. ಭಾರತ ತಜ್ಞ ಸಲಹಾ ಗುಂಪಿನ ಶಿಫಾರಸ್ಸಿನ ಅನ್ವಯ ಈ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

### ವಿಶ್ವಚೇತನ ಜೈಭೀಮ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಸನ್ಮಾನ

## ಜಾತಿ ಬೇಧವಿಲ್ಲದೆ ಪ್ರತಿಭಾ ಪುರಸ್ಕಾರ ಕಾರ್ಯ ಅಭಿನಂದನೀಯ

• ಪ್ರಜೋದಯ ವರದಿ

**ಅರಕಲಗೂಡು:** ವಿಶ್ವಚೇತನ ಜೈಭೀಮ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಇದೇ ಮೊದಲಬಾರಿಗೆ ತಾಲೂಕಿನ ಎಲ್ಲಾ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಂದೇ ವೇದಿಕೆಯಡಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುತ್ತಿರುವುದು ಅತ್ಯುತ್ತಮ ಮಾದರಿ ಕಾರ್ಯಕ್ರಮವಾಗಿದೆ ಎಂದು ಪಪಂ ಮಾಜಿ ಅಧ್ಯಕ್ಷ ಕೃಷ್ಣಯ್ಯ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ದೇವರಾಜು ಅರಸು ಭವನದಲ್ಲಿ ಶನಿವಾರ ಟ್ರಸ್ಟ್ ವತಿಯಿಂದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.97ಕ್ಕಿಂತ ಅಧಿಕ ಅಂಕ ಪಡೆದ ಎಲ್ಲಾ ಸಮುದಾಯದ ಮಕ್ಕಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಆಯಾ ಸಮುದಾಯದವರು ತಮ್ಮ ಮಕ್ಕಳಿಗೆ



ಮಾತ್ರ ಸೀಮಿತಗೊಳಿಸಿಕೊಂಡ ಪ್ರತಿಭಾ ಪುರಸ್ಕಾರ ಮಾಡುವುದನ್ನು ಕಳೆದ ಎರಡು ದಶಕಗಳಿಂದ ಗಮನಿಸಿದ್ದೇನೆ. ಇದಕ್ಕೆ ಮೊದಲ ಬಾರಿಗೆ ಭಿನ್ನವಾಗಿ ವಿಶ್ವಚೇತನ ಜೈಭೀಮ್ ಚಾರಿಟಬಲ್ ಟ್ರಸ್ಟ್‌ನವರು ಜಾತಿ ಸಮುದಾಯವೆಂದು ವಿಂಗಡಣೆ ಮಾಡದೇ ಒಂದೇ ವೇದಿಕೆಯಡಿ ಸುಮಾರು 50ಕ್ಕೂ ಹೆಚ್ಚು ಮಂದಿ ಮಕ್ಕಳು ಮತ್ತು ಅವರ ಪೋಷಕರನ್ನು ಆಹ್ವಾನಿಸಿ ಮಕ್ಕಳ ಸಾಧನೆಯನ್ನು ಎಲ್ಲಾ ಸಮಾಜಕ್ಕೆ ತೋರಿಸಿ ಗೌರವಿಸುವ ಕೆಲಸ ಆಗಿರುವುದು ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಆಶಯವನ್ನು ಎತ್ತಿಹಿಡಿದಂತಾಗಿದೆ ಎಂದು ಬಣ್ಣಿಸಿದರು.

ಹಿರಿಯ ಪತ್ರಿಕರ್ತ ಟಿ.ವಿಜಯ್ ಕುಮಾರ್ ಮಾತನಾಡಿ, ಎಷ್ಟೋ ಸಂಘಟನೆಗಳು ಆರಂಭಗೊಂಡ ಕೆಲವೇ ತಿಂಗಳಲ್ಲಿ ತನ್ನ ಕಾರ್ಯವೈಖರಿಗಳನ್ನು ಸ್ಥಗಿತಗೊಳಿಸುತ್ತವೆ. ಆದರೆ ಅಂಬೇಡ್ಕರ್ ಚಿಂತನೆಗಳೊಂದಿಗೆ ಒಂದು ವರ್ಷಗಳ ಹಿಂದೆ ಸ್ಥಾಪನೆಗೊಂಡಿರುವ ವಿಶ್ವಚೇತನ ಚಾರಿಟಬಲ್ ಟ್ರಸ್ಟ್ ಬಡ ವಿದ್ಯಾರ್ಥಿಗಳಿಗೆ ನೋಟ್ ಬುಕ್, ಬ್ಯಾಗ್ ಇತರೆ ಶಾಲಾ ಪರಿಕರಗಳ ವಿತರಣೆ, ಅನಾರೋಗ್ಯ ಪೀಡಿತರಿಗೆ ಆರ್ಥಿಕ ನೆರವು, ರಕ್ತದಾನ ಶಿಬಿರ, ಪರಿಸರ ಕಾರ್ಯಕ್ರಮ, ಉನ್ನತ ವಿದ್ಯಾಭ್ಯಾಸಕ್ಕೆ ತಜ್ಞರಿಂದ ಮಾರ್ಗದರ್ಶನ ಕೊಡಿಸುವಿಕೆ ಹಾಗೂ ಎಲ್ಲಾ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಸೇರಿದಂತೆ ಇತರೆ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ಒಂದು ವರ್ಷದಲ್ಲಿ ಸಾರ್ಥಕತೆಯನ್ನು ಸಹಕಾರಗೊಳಿಸಿದೆ. ಇದೇ ನಿಟ್ಟಿನಲ್ಲಿ ಮುಂದಿನ ಕಾರ್ಯಕ್ರಮಗಳು ಸಾಗಲಿ ಎಂದು ಆಶಿಸಿದರು.

ಮಾಜಿ ಜಿಪಂ ಸದಸ್ಯ ಬರಗೂರು ರವಿ ಮಾತನಾಡಿ, ತಾಲ್ಲೂಕಿನಲ್ಲಿಯೇ ಪ್ರಥಮ ಎನ್ನಲಾದ ಈ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಇಲ್ಲಿ ಆಗಮಿಸಿರುವ ಎಲ್ಲಾ ವಿದ್ಯಾರ್ಥಿಗಳು ಕೂಡ ಶೇ.97ಕ್ಕಿಂತ ಅಧಿಕ ಅಂಕ ಪಡೆದವರೇ ಆಗಿದ್ದಾರೆ. ಅಲ್ಲದೆ ಎಲ್ಲಾ ಸಮುದಾಯಕ್ಕೆ ಸೇರಿದವರು ಎಂಬುದು ಹೆಮ್ಮೆಯ ವಿಷಯವಾಗಿದೆ. ಹೀಗೆ ಯಾವುದೇ ತಾರತಮ್ಯ, ಜಾತಿ ಬೇಧ, ರಾಜಕೀಯ ಪ್ರೇರಿತವಾಗಿ ಕಾರ್ಯಗಳು ನಡೆಯಬಾರದು. ಸಾಮಾನ್ಯರನ್ನು ಕರೆಸಿ ಕಾರ್ಯಕ್ರಮ ಆಯೋಜನೆ ಮಾಡಿದರೇ ಅದು ನೈಜತೆಯನ್ನು ಉಂಟುಮಾಡಲಿದೆ. ಕೇವಲ ಪ್ರಚಾರಕ್ಕೆ ಸೀಮಿತಗೊಳ್ಳಬಾರದು. ಇಂದಿನ ಪ್ರತಿಭಾವಂತ ವಿದ್ಯಾರ್ಥಿಗಳು ಪೋಷಕರೊಂದಿಗೆ ಆಗಮಿಸಿ ಸ್ವೀಕರಿಸಿರುವುದು ಅವರಿಗೆ ದೊಡ್ಡ ಗೌರವ ತಂದುಕೊಟ್ಟಿದೆ ಎಂದು ಹೇಳಿದರು.

ಕಾರ್ಯಕ್ರಮ ಕುರಿತು ಕಂದಾಯ ಇಲಾಖೆ ಅಧಿಕಾರಿಗಳಾದ ಸೋಮಶೇಖರ್, ಸಿ.ಸ್ವಾಮಿ, ಎಂಜಿನಿಯರ್ ಶಿವಕುಮಾರ, ವಕೀಲ ಸತೀಶ್, ಟ್ರಸ್ಟ್ ಅಧ್ಯಕ್ಷ ಕಿರಣ್, ಶಿಕ್ಷಕರ ಸಂಘದ ಅಧ್ಯಕ್ಷ ಪ್ರಕಾಶ್, ಗುತ್ತಿಗೆದಾರ ರಮೇಶ್, ಮೋಹನ್, ಪ್ರದೀಪ್, ಅಶೋಕ್, ರಾಜೇಂದ್ರ, ಮೋಹನ್‌ಕುಮಾರ್, ರವಿ ಇತರರು ಉಪಸ್ಥಿತರಿದ್ದರು.

## ಮೋದಿ ಸೇವೆ ದೇಶಕ್ಕೆ ಮತ್ತಷ್ಟು ಲಭಿಸಲಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ದೇಶದ ಪ್ರಧಾನಿ ನರೇಂದ್ರ ಮೋದಿ ಅವರು ಸುದೀರ್ಘ ಅವಧಿಯ ಪ್ರಧಾನಿಯಾಗಿ ಸೇವೆ ಸ'ಲ್ಲಿಸ'ುತ್ತಿ ರ'ುವ' ಹಿನ್ನೆಲೆಯಲ್ಲಿ ಅವರ ಸೇವೆ ಇನ್ನಷ್ಟು ದೇಶದ ಜನತೆಗೆ ಲಭಿಸಲಿ ಎಂದು



ಭಗವಂತನಲ್ಲಿ ರಾಜ್ಯ ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸೋಮವಾರಪೇಟೆಗೆ ತೆರಳುತ್ತಿದ್ದ ಅವರು ಮಾರ್ಗ ಮಧ್ಯೆ ಪಟ್ಟಣದ ಶ್ರೀ ಜಯಚಾಮರಾಜೇಂದ್ರ ವೃತ್ತದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಪ್ರಧಾನಿ ನರೇಂದ್ರ ಮೋದಿಯವರು 12 ವರ್ಷಗಳ ಕಾಲ ಸುದೀರ್ಘ ಅವಧಿಯಿಂದ ಪ್ರಧಾನ ಮಂತ್ರಿಯಾಗಿ ಸೇವೆ ನೀಡುತ್ತಿದ್ದಾರೆ. ಅವರು ಅಧಿಕಾರದಲ್ಲಿ ಇನ್ನಷ್ಟು ಕಾಲ ಮುಂದುವರೆದು ದೇಶವನ್ನು ಮುನ್ನೆಡಸಲಿ ಎಂದು ಹಾರೈಸಲಾಗುತ್ತಿದೆ ಎಂದು ಹೇಳಿದರು.

ದೇಶದಾದ್ಯಂತ ಏಕ್ ಪೇಡ್ ಮಾ ಕೆ ನಾಮ್ ಪರ್ (ತಾಯಿಯ ಒಂದು ಮರ) ಹೆಸರಿನಲ್ಲಿ ನಡೆಲಾಗುತ್ತಿದೆ ಎಂದ ಅವರು, ವೃತ್ತದ ಬಳಿ ಗಿಡ ನೆಟ್ಟರು. ದೇವಾಲಯಗಳಲ್ಲಿ ಪ್ರಧಾನ ಮಂತ್ರಿಗೆ ಶುಭ ಕೋರಿ ಪೂಜೆ ಸಲ್ಲಿಸಲಾಗುತ್ತಿದೆ ಎಂದರು.

ಕೇಂದ್ರದ ಕೃಷಿ ಸಂಶೋಧನಾ ಮಂಡಳಿ ಸದಸ್ಯ ಮಳಲಿ ನಾರಾಯಣ್, ತಾಲ್ಲೂಕು ಅಧ್ಯಕ್ಷ ಕೆ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಗಿರೀಶ್, ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ಅಮಿತ್ ಸೇರಿ ಮತ್ತಿತರರು ಹಾಜರಿದ್ದರು.

# ಯಗಚಿ ಜಲಾಶಯದಲ್ಲಿ ಕುಸಿಯುತ್ತಿದೆ ನೀರಿನ ಮಟ್ಟ

## ಸದ್ಯಕ್ಕಿಲ್ಲ ಕುಡಿಯುವ ನೀರಿಗೆ ಸಮಸ್ಯೆ | ಕೃಷಿ ಚಟುವಟಿಕೆಗೆ ಆತಂಕ

• ಪ್ರಜೋದಯ ವರದಿ



**ಬೇಲೂರು:** ಮುಂಗಾರು ಮಳೆ ವಿಳಂಬವಾಗಿರುವ ಪರಿಣಾಮ ಯಗಚಿ ಜಲಾಶಯದ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿರುವುದು ಕೃಷಿಕರಲ್ಲಿ ಆತಂಕ ಮೂಡಿಸಿದೆ. ಕುಡಿಯುವ ನೀರಿಗೆ ತಕ್ಷಣದ ಸಮಸ್ಯೆ ಇಲ್ಲವೆಂದು ಅಧಿಕಾರಿಗಳು ಭರವಸೆ ನೀಡಿದ್ದರೂ, ಕೃಷಿ ಚಟುವಟಿಕೆಗಳಿಗೆ ನೀರಿನ ಪೂರೈಕೆ ಯಾವಾಗ ಎಂಬ ಪ್ರಶ್ನೆ ರೈತರನ್ನು ಕಾಡುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯ ಪರ್ವತ ಶ್ರೇಣಿಯಲ್ಲಿ ಹುಟ್ಟುವ ಯಗಚಿ ನದಿ, ಬೇಲೂರು ತಾಲ್ಲೂಕು ಮೂಲಕ ಹರಿದು ಗೊರೂರು ಬಳಿ ಹೇಮಾವತಿ ನದಿಯನ್ನು ಸೇರುತ್ತದೆ. ಈ ನದಿಗೆ ಬೇಲೂರು ಸಮೀಪ ನಿರ್ಮಿಸಿರುವ ಯಗಚಿ ಜಲಾಶಯವು 3.164 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸಾವಿರಾರು ಜನರ ಜೀವನಾಡಿಯಾಗಿದೆ.

ಜಲಾಶಯದಿಂದ ಬೇಲೂರು, ಚಿಕ್ಕಮಗಳೂರು ಹಾಗು ಅರಸೀಕೆರೆ ಭಾಗಗಳಿಗೆ ಕುಡಿಯುವ ನೀರು ಪೂರೈಕೆಯಾಗುವುದರ ಜೊತೆಗೆ ಬೇಲೂರು, ಅಲೂರು ಹಾಗು ಹಾಸನ ಭಾಗದ ಸುಮಾರು 37 ಸಾವಿರ ಎಕರೆ ಕೃಷಿಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತದೆ. ಹಾಲ್ತೂರೆ ಸಮೀಪದ ಯಗಚಿ ಏತ ನೀರಾವರಿ ಯೋಜನೆಯ ಮೂಲಕ ಬಯಲುಸೀಮೆ ಪ್ರದೇಶಗಳಿಗೂ ನೀರು ಹರಿಸಲಾಗುತ್ತಿದೆ.

**ಮಳೆಯ ಕೊರತೆ, ರೈತರಲ್ಲಿ ಆತಂಕ**

ಕಳೆದ ವರ್ಷ ಮೇ ತಿಂಗಳ ಅಂತ್ಯದ ವೇಳೆಗೆ ಯಗಚಿ ಜಲಾಶಯ ಭರ್ತಿಯಾಗಿ ರೈತರಲ್ಲಿ ಆಶಾಭಾವನೆ ಮೂಡಿಸಿತ್ತು. ಈ ಬಾರಿ ಚಿಕ್ಕಮ ಗಳೂರು ಹಾಗು ಮೂಡಿಗೆರೆ ಭಾಗದಲ್ಲಿ ನಿರೀಕ್ಷಿತ ಪ್ರಮಾಣದ ಮಳೆಯಾಗದ ಕಾರಣ ಜಲಾಶಯಕ್ಕೆ ಹೆಚ್ಚಿನ ಒಳಹರಿವು ಬಂದಿಲ್ಲ. ಪ್ರಸ್ತುತ ಜಲಾಶಯದಲ್ಲಿ 2.791 ಟಿಎಂಸಿ ನೀರು ಸಂಗ್ರಹ ವಿದ್ದು, ಸುಮಾರು 40 ಕ್ಯೂಸೆಕ್ ಒಳಹರಿವು ದಾಖಲಾಗಿದೆ. ಒಟ್ಟು ಸಂಗ್ರಹದಲ್ಲಿನ 2.433 ಟಿಎಂಸಿ ನೀರು ಬಳಕೆಗೆ ಲಭ್ಯವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಳೆ ಕೊರತೆಯಿಂದಾಗಿ ಜಲಾಶಯದ ನೀರಿನ ನಿರ್ವಹಣೆಯಲ್ಲಿ ಎಚ್ಚರಿಕೆಯ ಕ್ರಮ ಕೈಗೊಳ್ಳಲಾಗಿದ್ದು, ಮೊದಲ ಆದ್ಯತೆ ಕುಡಿಯುವ ನೀರಿನ ಸಂರಕ್ಷಣೆಗೆ ನೀಡಲಾಗಿದೆ. ಅದರ ಪರಿಣಾಮ ಕೃಷಿ ಉದ್ದೇಶಗಳಿಗೆ ನೀರು ಬಿಡುಗಡೆ ಮಾಡುವ ಬಗ್ಗೆ ಇನ್ನೂ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳದೆ ಇರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

ಉತ್ತಮ ಮುಂಗಾರಿನ ನಿರೀಕ್ಷೆಯಲ್ಲಿರುವ ಅಧಿಕಾರಿಗಳು ಪರಿಸ್ಥಿತಿಯನ್ನು ನಿರಂತರವಾಗಿ ಅವಲೋಕಿಸುತ್ತಿದ್ದು, ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ ನೀಡಿದ್ದಾರೆ.

**(ಯಗಚಿ ಅಣೆಕಟ್ಟೆ ನೀರಿನ ಮಟ್ಟ)**

- ಜಲಾಶಯ ಸಾಮರ್ಥ್ಯ: 3.164 ಟಿಎಂಸಿ
- ಪ್ರಸ್ತುತ ನೀರಿನ ಸಂಗ್ರಹ: 2.791 ಟಿಎಂಸಿ
- ಬಳಕೆಗೆ ಲಭ್ಯ ನೀರು: 2.433 ಟಿಎಂಸಿ
- ಒಳಹರಿವು: 40 ಕ್ಯೂಸೆಕ್

**ಕಳೆದ ವರ್ಷದ ಉತ್ತಮ ಮುಂಗಾರು ಮತ್ತು ಹಿಂಗಾರು ಮಳೆಯಿಂದಾಗಿ ಕೃಷಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬಳಕೆಯಾಗಿರಲಿಲ್ಲ. ಪ್ರಸ್ತುತ ಜಲಾಶಯದಲ್ಲಿ ಸಾಕಷ್ಟು ನೀರು ಲಭ್ಯವಿದ್ದರೂ, ಮಳೆಯ ಅನಿಶ್ಚಿತತೆ ಹಿನ್ನಲೆ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.**
**-ಸಂದೀಪ್, ಯಗಚಿ ನೀರಾವರಿ ನಿಗಮದ ಇಂಜಿನೀಯರ್**

**ಜಲಾಶಯದಲ್ಲಿ ಪ್ರಸ್ತುತ 2.433 ಟಿಎಂಸಿ ನೀರು ಲಭ್ಯವಿದೆ. ಮೊದಲು ಕುಡಿಯುವ ನೀರಿನ ಅಗತ್ಯವನ್ನು ಭದ್ರಪಡಿಸುವುದು ಮುಖ್ಯ. ಮಳೆಯ ಪ್ರಮಾಣ ಮತ್ತು ನೀರಿನ ಲಭ್ಯತೆ ಆಧರಿಸಿ ಕೃಷಿ ಚಟುವಟಿಕೆಗಳಿಗೆ ನೀರು ಹರಿಸುವ ಬಗ್ಗೆ ಸಭೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು.**
**-ರಾಮಕೃಷ್ಣ, ಸಹಾಯಕ ಕಾರ್ಯಪಾಲಕ ಇಂಜಿನೀಯರ್**

## ಜಿಲ್ಲೆಯಲ್ಲಿ 1,242 ಸರ್ಕಾರಿ ಶಿಕ್ಷಕರ ಹುದ್ದೆ ಖಾಲಿ

» ಮೊದಲನೇ ಪುಟದಿಂದ

ಅರಸೀಕೆರೆ ತಾಲ್ಲೂಕಿನಲ್ಲಿ 1025 ಹುದ್ದೆಗಳ ಪೈಕಿ 956 ಭರ್ತಿಯಾಗಿದ್ದು, 69 ಖಾಲಿ ಇವೆ. ಬೇಲೂರು ತಾಲ್ಲೂಕಿನಲ್ಲಿ 649 ಹುದ್ದೆಗಳಲ್ಲಿ 601 ಭರ್ತಿಯಾಗಿ 48 ಖಾಲಿ ಇವೆ. ಚನ್ನರಾಯಪಟ್ಟಣದಲ್ಲಿ 782 ಹುದ್ದೆಗೆ 700 ಶಿಕ್ಷರ ಭರ್ತಿಯಾಗಿದ್ದು, 82 ಸ್ಥಾನಗಳು ಖಾಲಿ ಇವೆ.

ಹಾಸನ ತಾಲ್ಲೂಕಿಗೆ 902 ಹುದ್ದೆಗಳು ಮಂಜೂರಾಗಿದ್ದು, 825 ಹುದ್ದೆಗಳು ಭರ್ತಿಯಾಗಿ 77 ಹುದ್ದೆಗಳು ಖಾಲಿ ಇವೆ. ಹೊಳೆನರಸೀಪುರದಲ್ಲಿ 641 ಹುದ್ದೆಯಲ್ಲಿ 591 ಭರ್ತಿಯಾಗಿ 50 ಹುದ್ದೆ ಖಾಲಿ ಇವೆ. ಸಕಲೇಶಪುರ ತಾಲ್ಲೂರ್ಕಿನ 406 ಹುದ್ದೆಗಳಿಗೆ 311 ಭರ್ತಿಯಾಗಿ 95 ಖಾಲಿ ಇವೆ.

**646 ಪ್ರೌಢ ಶಿಕ್ಷಕರ ಹುದ್ದೆ ಖಾಲಿ**

ಜಿಲ್ಲೆಗೆ ಒಟ್ಟು 2,224 ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 1,578 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದು, 646ಹುದ್ದೆಗಳು ಖಾಲಿ ಇವೆ. ಆಲೂರು ತಾಲ್ಲೂಕಿಗೆ ಒಟ್ಟು 114 ಹುದ್ದೆಗಳು ಮಂಜೂರಾಗಿದ್ದು 93 ಹುದ್ದೆಗಳು ಭರ್ತಿಯಾಗಿದ್ದು, 51 ಹುದ್ದೆಗಳು ಖಾಲಿ ಇವೆ. ಅರಕಲಗೂಡು ತಾಲ್ಲೂಕಿಗೆ 250 ಹುದ್ದೆಗಳು ಮಂಜೂರಾಗಿದ್ದು, 143 ಹುದ್ದೆಗಳು ಭರ್ತಿಯಾಗಿದ್ದು 143 ಹುದ್ದೆಗಳು ಖಾಲಿ ಇವೆ. ಅರಸೀಕೆರೆ ತಾಲ್ಲೂಕಿನಲ್ಲಿ 405 ಹುದ್ದೆಗಳ ಪೈಕಿ 310 ಭರ್ತಿಯಾಗಿದ್ದು, 95 ಖಾಲಿ ಇವೆ. ಬೇಲೂರು ತಾಲ್ಲೂಕಿನಲ್ಲಿ 201 ಹುದ್ದೆಗಳಲ್ಲಿ 159 ಭರ್ತಿಯಾಗಿ 42 ಖಾಲಿ ಇವೆ. ಚನ್ನರಾಯಪಟ್ಟಣದಲ್ಲಿ 384 ಹುದ್ದೆಗೆ 184 ಶಿಕ್ಷರ ಭರ್ತಿ ಯಾಗಿದ್ದು, 119 ಸ್ಥಾನಗಳು ಖಾಲಿ ಇವೆ.

ಹಾಸನ ತಾಲ್ಲೂಕಿಗೆ 396 ಹುದ್ದೆಗಳು ಮಂಜೂರಾಗಿದ್ದು, 366 ಹುದ್ದೆಗಳು ಭರ್ತಿಯಾಗಿ 30 ಹುದ್ದೆಗಳು ಖಾಲಿ ಇವೆ. ಹೊಳೆನರಸೀಪುರದಲ್ಲಿ 310 ಹುದ್ದೆಯಲ್ಲಿ 184 ಭರ್ತಿಯಾಗಿ 126 ಹುದ್ದೆ ಖಾಲಿ ಇವೆ. ಸಕಲೇಶಪುರ ತಾಲ್ಲೂಕಿನ 134 ಹುದ್ದೆಗಳಿಗೆ 58 ಭರ್ತಿಯಾಗಿ 76 ಖಾಲಿ ಇವೆ.

## ಶೀಘ್ರ ಹೊರಗುತ್ತಿಗೆ ವೈದ್ಯರ ಖಾಯಂ

» ಮೊದಲನೇ ಪುಟದಿಂದ

ಅದಕ್ಕೆ ಆಸ್ಪತ್ರೆಯಲ್ಲಿ ಹೆಚ್ಚು ವಿಷ ಜಂತುಗಳು ಕಡಿತದ ಔಷಧಿಗಳನ್ನು ಸಂಗ್ರಹ ಮಾಡಿ ಇಟ್ಟುಕೊಳ್ಳಬೇಕು. ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ರೇಬಿಸ್ ಕಡಿತ ಔಷಧಿಗೆ ಜನರು ಹೊರಗಿನಿಂದ 700 ರೂ. ಪಾವತಿಸಿ ಔಷಧಿಯನ್ನು ತರಿಸಿಕೊಳ್ಳುತ್ತಿದ್ದಾರೆಂದರೆ ಒಪ್ಪುವ ವಿಚಾರವಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಸಿಗುವ ಔಷಧಿಗಳನ್ನು ಹೊರಗಿನಿಂದ ತರಬೇಕೆಂದು ಚೀಟಿ ಬರೆದು ಕಳುಹಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದ್ದು ಮುಂದೆ ಈ ರೀತಿ ಕಂಡು ಬಂದರೆ ಕಠಿಣ ಕ್ರಮ ಜರುಗಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಆಸ್ಪತ್ರೆ ಆಡಳಿತಾಧಿಕಾರಿ ಡಾ|| ಅರುಣ್ ಕುಮಾರ್ ಮತ್ತು ತಾಲ್ಲೂಕು ವೈದ್ಯಾಧಿಕಾರಿ ಡಾ|| ಮಹೇಶ್ ಅವರ ಪ್ರತಿಕ್ರಿಯೆಗೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಮುಂದಿನ ದಿನಗಳಲ್ಲಿ ಔಷಧಿ ಮತ್ತು ರೋಗಿಗಳ ಕಡೆಯಿಂದ ಯಾವುದೇ ಸಮಸ್ಯೆ ಇದೆ ಎಂಬುದು ನಮ್ಮ ಗಮನಕ್ಕೆ ಬಂದರೆ ಅದಕ್ಕೆ ನೀವೇ ಹೊಣೆಗಾರರಾಗುತ್ತೀರಿ ಎಂದು ಎಚ್ಚರಿಕೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಕರ್ನಾಟಕದ ಇತಿಹಾಸದಲ್ಲೇ ಮಧ್ಯರಾತ್ರಿ ಪ್ರಗತಿ ಪರಿಶೀಲನೆ ಸಭೆ ನಡೆಸಿ ಆಡಳಿತ ಯಂತ್ರಕ್ಕೆ ಸಚಿವ ಯು.ಟಿ.ಖಾದರ್ ಚುರುಕು ಮುಟ್ಟಿಸಿದ್ದಾರೆ. ವಿಧಾನಸಭಾ ಅಧ್ಯಕ್ಷರಾಗಿದ್ದಾಗ ಅವರ ಕಾರ್ಯವೈಖರಿ ನೋಡಿದ್ದೇನೆ. ಸದನದಲ್ಲಿ ಮಾತನಾಡಲು ಅವಕಾಶ ಸಿಗುವುದೆಂದರೆ ಕ್ಷೇತ್ರ ಅಭಿವೃದ್ಧಿಗೆ ಅನುದಾನ ಸಿಕ್ಕಷ್ಟೇ ಖುಷಿಯಾಗು ತ್ತದೆ. ಅಂತದರಲ್ಲಿ ರಾಜ್ಯದ ಎಲ್ಲಾ ಶಾಸಕರಿಗೂ ಸಮಾನ ಅವಕಾಶ ಕಲ್ಪಿಸಿದ ಮೊದಲ ಸಭಾಧ್ಯಕ್ಷರಲ್ಲಿ ಇವರು ಎಂದರೆ ತಪ್ಪಾಗದು. ಆರೋಗ್ಯ ಇಲಾಖೆಯ ಕುರಿತು ಸಚಿವ ಯುಟಿ ಖಾದರ್ ಅವರಿಗೆ ಆಳವಾದ ಜ್ಞಾನವಿದೆ. ಈ ಹಿಂದೆ ಕೂಡ ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಅನುಭವ ಹೊಂದಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್ ಮತ್ತಿತರರಿದ್ದರು.

## ಜವಾಬ್ದಾರಿಯ ಸ್ಪಷ್ಟತೆ ಇದ್ದರೆ ಅನುಕೂಲ: ಕೃಷ್ಣಭೈರೇಗೌಡ

• ಪ್ರಜೋದಯ ವರದಿ



**ಬೆಂಗಳೂರು:** ಜವಾಬ್ದಾರಿ ವಹಿಸುವಾಗ ಸ್ಪಷ್ಟತೆ ಇದ್ದರೆ ಕೆಲಸ ಮಾಡಲು ಅನುಕೂಲ ವಾಗುತ್ತದೆ. ಇಲ್ಲವಾದರೆ ನಿರೀಕ್ಷೆಗೆ ತಕ್ಕಂತೆ ಫಲಿತಾಂಶ ಕೊಡಲು ಆಗುವುದಿಲ್ಲ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದರು.

ತಮಗೆ ವಹಿಸಿರುವ ಬೆಂಗಳೂರು ಅಭಿವೃದ್ಧಿ ಖಾತೆ ಕುರಿತ ಗೊಂದಲ ಪರಿಹರಿಸುವಂತೆ ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ದೆಹಲಿಗೆ ತೆರಳಿದ್ದ ಅವರು ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದರು. ಅಸಮಾಧಾನ ಇಲ್ಲ, ಕಠಿಣವಾದ ಜವಾಬ್ದಾರಿ ವಹಿಸಿದ್ದಾರೆ. ಬೆಂಗಳೂರಿನ ಜನರ ಬಗ್ಗೆ ಅಪಾರ ನಿರೀಕ್ಷೆ ಇದೆ, ಸುಧಾರಣೆ ಆಗಬೇಕು. ಜವಾಬ್ದಾರಿ ಬಗ್ಗೆ ಸ್ಪಷ್ಟತೆ ಇರಬೇಕೆಂದರು.

ನಾನು ಏನೇ ಹೇಳಿದರೂ ಉತ್ತಮದಾಯಕವಾಗಿರುತ್ತದೆ. ಸ್ಪಷ್ಟತೆ ಇದ್ದರೆ ನಿರೀಕ್ಷೆಯಷ್ಟು ಕೆಲಸ ಮಾಡಬಹುದು. ಫಲಿತಾಂಶ ಉತ್ತಮವಾಗಿರುತ್ತದೆಂದು ಹೇಳಿದ್ದೇನೆ. ಮುಖ್ಯ ಮಂತ್ರಿ ಈ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂದರು.

ಬಗೆಹರಿಯದ ಗೊಂದಲ

ಬಿಡಿಎ ಮತ್ತು ಬಿಎಂಆರ್‌ಡಿಎ ಹೊರತು ಪಡಿಸಿ ಬೆಂಗಳೂರು ಅಭಿವೃದ್ಧಿ ಖಾತೆ ವಹಿಸಿರುವುದಕ್ಕೆ ತೀವ್ರ ಅಸಮಾಧಾನಗೊಂಡಿದ್ದ ಕೃಷ್ಣ ಬೈರೇಗೌಡ, ಈ ಖಾತೆ ಗೊಂದಲ ಪರಿಹರಿಸುವಂತೆ ಹೈಕಮಾಂಡ್ ನಾಯಕರಿಗೆ ಅಹವಾಲು ಸಲ್ಲಿಸಲು ಭಾನುವಾರ ರಾತ್ರಿ ದೆಹಲಿಗೆ ತೆರಳಿದ್ದರು. ಅವರ ಜೊತೆ, ಶಾಸಕ ರಿಜ್ವಾನ್ ಅರ್ಷದ್ ಮತ್ತು ಶಾಸಕ ಎನ್.ಎಸ್.ಬೋಸರಾಜು ಅವರ ಪುತ್ರ ರವಿ ಬೋಸರಾಜು ಕೂಡಾ ಹೋಗಿದ್ದರು. ಶುಕ್ರವಾರ ರಾತ್ರಿ ಕೃಷ್ಣ ಬೈರೇಗೌಡ ದೆಹಲಿಯಿಂದ ವಾಪಾಸಾಗಿದ್ದಾರೆ. ಹೈಕಮಾಂಡ್‌ನಿಂದ ಯಾವುದೇ ಸ್ಪಷ್ಟ ಭರವಸೆ ಸಿಗದ ಕಾರಣ ಅವರು ಬೇಸರದಲ್ಲಿದ್ದಾರೆ ಎನ್ನಲಾಗಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ್ದ ಕೃಷ್ಣ ಬೈರೇಗೌಡ, ರಾಹುಲ್ ಗಾಂಧಿ ಅವರ ಗಮನಕ್ಕೂ ಖಾತೆ ಗೊಂದಲ ವಿಚಾರ ತಲುಪಿಸಿದ್ದಾರೆ. ಇದೇ ಸಂದರ್ಭದಲ್ಲಿ ದೆಹಲಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ ಕೃಷ್ಣ ಬೈರೇಗೌಡ ಅವರನ್ನು ಮನವೊಲಿಸಲು ಯತ್ನಿಸಿದ್ದಾರೆ.

## 5,000 ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ವಿತರಣೆ

### ಕಾಳಿಂಗಪ್ಪ ವೆಲ್ಫರ್ ಅಸೋಸಿಯೇಷನ್‌ನಿಂದ 23 ಲಕ್ಷ ರೂ. ವೆಚ್ಚದ ಕಾರ್ಯ

• ಪ್ರಜೋದಯ ವರದಿ




**ಹಾಸನ:** ಕಾಳಿಂಗಪ್ಪ ವೆಲ್ಫರ್ ಅಸೋಸಿಯೇಷನ್ ವತಿಯಿಂದ ಈ ವರ್ಷ 165 ಸರ್ಕಾರಿ ಶಾಲೆಗಳ ಸುಮಾರು 5,000 ವಿದ್ಯಾರ್ಥಿಗಳಿಗೆ 30 ಸಾವಿರ ನೋಟ್ ಪುಸ್ತಕ ಹಾಗೂ 500 ಶಾಲಾ ಬ್ಯಾಗ್‌ಗಳನ್ನು ಉಚಿತವಾಗಿ ವಿತರಿಸಲಾಗುವುದು ಎಂದು ಸಂಸ್ಥೆಯ ಮುಖ್ಯಸ್ಥ ಮಂಜುನಾಥ್ ಕಾಳಿಂಗಪ್ಪ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 13 ವರ್ಷಗಳಿಂದ ನಮ್ಮ ನಡೆ ಸರ್ಕಾರಿ ಶಾಲೆ ಕಡೆಗೆ ಎಂಬ ಅಭಿಯಾನದ ಮೂಲಕ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. 14ನೇ ವರ್ಷದ ಸೇವಾ ಕಾರ್ಯಗಳನ್ನು ಜೂನ್ 21 ರಿಂದ ಆರಂಭಿಸಲಾಗುವುದು. ಜೊತೆಗೆ ಡಿಜಿಟಲ್ ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಹಿರಿಯ ಪ್ರಾಥಮಿಕ ಶಾಲೆಗೆ ಹೊಸ ಸ್ಮಾರ್ಟ್ ಕ್ಲಾಸ್ ಸಾಧನ ಕೊಡುಗೆಯಾಗಿ ನೀಡಲಾಗುವುದು ಹಾಗು ವಿವಿಧ ತಾಲ್ಲೂಕುಗಳ ಶಾಲೆಗಳಿಗೆ ಗ್ರೀನ್ ಬೋರ್ಡ್‌ಗಳ ವಿತರಣೆ ಮಾಡುವುದನ್ನು ವಿಸ್ತರಿಸಲಾಗುವುದೆಂದು ತಿಳಿಸಿದರು.

ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಈ ವರ್ಷ 23 ಲಕ್ಷ ರೂ. ವೆಚ್ಚದ ಉಚಿತ ಸೇವಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿನಿಯರ ಶಿಕ್ಷಣ ಮತ್ತು ಆರೋಗ್ಯಕ್ಕೆ ವಿಶೇಷ ಆದ್ಯತೆ ನೀಡಿರುವ ಸಂಸ್ಥೆಯು, ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಉಚಿತ ಸೈಕಲ್‌ಗಳನ್ನು ವಿತರಿಸುವುದರ ಜೊತೆಗೆ ಪ್ರೌಢ ಶಾಲೆಗಳಲ್ಲಿ ಐದು ಸ್ಯಾನಿಟರಿ ಪ್ಯಾಡ್ ಬರ್ನರ್ (ಇನ್ಸಿನಿರೇಟರ್) ಅಳವಡಿಸಲು ನಿರ್ಧರಿಸಿದೆ ಎಂದು ಹೇಳಿದರು.

ನಮ್ಮ ಸಂಸ್ಥೆಯ ಈ ಸೇವಾ ಯೋಜನೆಗಳು ಹಾಸನ ಜಿಲ್ಲೆಗೆ ಮಾತ್ರ ಸೀಮಿತವಾಗದೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಮಂಡ್ಯ, ತುಮಕೂರು ಹಾಗು ಕೋಲಾರ ಜಿಲ್ಲೆಗಳಿಗೂ ವಿಸ್ತರಿಸಲ್ಪಟ್ಟಿವೆ. ಕಳೆದ 13 ವರ್ಷಗಳಲ್ಲಿ ಸರ್ಕಾರಿ ಶಾಲೆಗಳ ಉಳಿವು ಮತ್ತು ಅಭಿವೃದ್ಧಿಗಾಗಿ ಸಂಸ್ಥೆಯು ವೈಯಕ್ತಿಕವಾಗಿ 1.5 ಕೋಟಿಗೂ ಅಧಿಕ ಮೊತ್ತವನ್ನು ವಿನಿಯೋಗಿಸಿದ್ದು, ಈ ಬಾರಿಯ ಯೋಜನೆಗಳ ಮೂಲಕ ಮತ್ತಷ್ಟು ವಿದ್ಯಾರ್ಥಿಗಳಿಗೆ ನೆರವು ನೀಡುವ ಗುರಿ ಹೊಂದಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೈ.ಬಿ.ಗಂಗಾಧರ್, ಗುರು, ಸತೀಶ್, ರಹೀಮ್, ರವಿ ಕೆ.ರಾವ್, ವೆಂಕಟೇಶ್ ಇದ್ದರು.

## ರಸಗೊಬ್ಬರ, ಬಿತ್ತನೆ ಬೀಜ ಕೊರತೆಯಾಗದಿರಲಿ

» ಮೊದಲನೇ ಪುಟದಿಂದ

**ಬಿಡದಿ ಟೌನ್‌ಶಿಪ್‌ಗೆ ಮೋದಿ ಬೆಂಬಲ**

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಬಿಡದಿ ಟೌನ್‌ಶಿಪ್ ಯೋಜನೆ ಯನ್ನು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಮಾರ್ಗದರ್ಶನದಂತೆ ಕೈಗೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಸಹ ಯೋಜನೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದರು.

ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಳ ಮೂಲಸೌಕರ್ಯ ಒತ್ತಡವಾಗಿರುವ ಹಿನ್ನಲೆಯಲ್ಲಿ ಟೌನ್‌ಶಿಪ್ ಅಗತ್ಯವಿದೆ. ನಾನು ಹಲವು ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸಿದ್ದೇನೆ. ನೀವು ಕೂಡ ಮುಂದುವರಿಸಿ ಎಂದು ಪ್ರಧಾನಿ ಮೋದಿ ಹೇಳಿದ್ದಾರೆಂದರು.

ರಾಜ್ಯದಲ್ಲಿ ವಿಶೇಷ ಮತದಾರರ ಪರಿಶೀಲನ ಪ್ರಕ್ರಿಯೆ ಆರಂಭವಾಗಲಿದ್ದು, ಮತದಾರರ ಅರ್ಹತೆ ದಾಖಲೆಗಳಿಗೆ ಆಧಾರ್ ಸಂಖ್ಯೆಯನ್ನು ತಮ್ಮ ಮತದಾನದ ಹಕ್ಕನ್ನು ಉಳಿಸಿಕೊಳ್ಳಬೇಕು. ಮತಗಟ್ಟೆ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಲಿದ್ದು, ಎಲ್ಲರೂ ಸಹಕರಿಸಬೇಕು ಎಂದರು.

ಯೋಜನೆಗಳಿಗೆ ಮರು ಅರ್ಜಿ

ಗೃಹಲಕ್ಷ್ಮಿ ಯೋಜನೆಯಡಿ ಅನರ್ಹ ಫಲಾನುಭವಿಗಳ ಖಾತೆಗಳಿಗೆ ಹಣ ಜಮೆಯಾಗಿರುವ ಪ್ರಕರಣಗಳು ಬೆಳಕಿಗೆ ಬಂದಿರುವ ಕಾರಣ, ಫಲಾನು ಭವಿಗಳು ಮರು ಅರ್ಜಿ ಸಲ್ಲಿಸಬೇಕಾ ಗುತ್ತದೆ. ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮಾಹಿತಿ ಯನ್ನೂ ಮರು ಪರಿಶೀಲಿಸಲಾಗುವುದೆಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತಡೆಯುವ ಉದ್ದೇಶದಿಂದ ಸರ್ಕಾರಿ ಕಚೇರಿಗಳಲ್ಲಿ ಹಿರಿಯ ಅಧಿಕಾರಿಗಳ ದೂರುವಾಣಿ ಸಂಖ್ಯೆಯನ್ನು ಪ್ರದರ್ಶಿಸಲು ಸೂಚನೆ ನೀಡಲಾಗುವುದು ಎಂದರು. ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿ ಲಂಚ ಕೇಳಿದರೆ ನೇರವಾಗಿ ದೂರು ನೀಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

## ಬಿಳಿಸುಳಿ ರೋಗ ನಿಯಂತ್ರಣಕ್ಕೆ ಜಾಗೃತಿ



• **ಪ್ರಜೋದಯ ವರದಿ**

**ಹಳೇಬೀಡು:** ಜೋಳ ಬೆಳೆಗೆ ತಗಲುವ ಬಿಳಿಸುಳಿ ರೋಗದ ನಿಯಂತ್ರಣ ಕುರಿತು ರೈತರಿಗೆ ಅರಿವು ಮೂಡಿಸುವ ಉದ್ದೇಶದಿಂದ ಹಳೇಬೀಡು ಸಮೀಪದ ಸೊಪ್ಪನಹಳ್ಳಿ ಗ್ರಾಮದಲ್ಲಿ ಕೃಷಿ ಅಧಿಕಾರಿಗಳು ರೈತರ ಜಮೀನಿಗೆ ತೆರಳಿ ಜಾಗೃತಿ ಮೂಡಿಸಿದರು.

ಕೃಷಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕ ಕಾಂತರಾಜು ಅವರು, ಜೋಳ ಬೆಳೆಯಲ್ಲಿ ಕಂಡುಬರುವ ಬಿಳಿಸುಳಿ ರೋಗದ ಲಕ್ಷಣಗಳು, ದುಷ್ಪರಿಣಾಮಗಳು ಹಾಗು ನಿಯಂತ್ರಣ ಕ್ರಮಗಳಕುರಿತು ರೈತರಿಗೆ ಸ್ಥಳದಲ್ಲೇ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಸೂಚನೆಯಂತೆ ಜಿಲ್ಲೆಗೆ ಸರಬರಾಜು ಮಾಡಲಾಗಿರುವ ಮೆಕ್ಕೆಜೋಳದ ಬಿತ್ತನೆ ಬೀಜಗಳಿಗೆ ಪ್ರತಿ ಕೆ.ಜಿ.ಗೆ 3 ಗ್ರಾಂ ಮೆಟಲಾಕ್ಸಿಲ್ ಶಿಲೀಂಧ್ರನಾಶಕ ಬಳಸಿ ಬೀಜೋಪಚಾರ ನಡೆಸಿ ವಿತರಿಸಲಾಗಿದೆ. ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರುವ ಅಜೋಕ್ಸಿಸ್ಟ್ರೋಬಿನ್ ಹಾಗು ಡೈಫೆನಕೊನಜೋಲ್ ಸಂಯುಕ್ತ ಶಿಲೀಂಧ್ರ ನಾಶಕವನ್ನು ಪ್ರತಿ ಲೀಟರ್ ನೀರಿಗೆ 1 ಮಿಲಿ ಪ್ರಮಾಣದಲ್ಲಿ ಬೆರೆಸಿ ಸಿಂಪಡಿಸಬೇಕು. ಒಂದು ಎಕರೆ ಪ್ರದೇಶಕ್ಕೆ 100 ಲೀಟರ್ ನೀರಿಗೆ 100 ಮಿಲಿ ಔಷಧ ಮಿಶ್ರಣ ಮಾಡಬೇಕು. 20 ಗುಂಟೆ ಪ್ರದೇಶಕ್ಕೆ 50 ಲೀಟರ್ ನೀರಿಗೆ 50 ಮಿಲಿ ಔಷಧ ಬೆರೆಸಿ ಸಿಂಪಡಣೆ ಮಾಡುವಂತೆ ರೈತರಿಗೆ ವಿವರಿಸಿದರು.

ಕೃಷಿ ಇಲಾಖೆಯ ಸಿಬ್ಬಂದಿ ಹಾಗು ಗ್ರಾಮದ ರೈತರು ಭಾಗವಹಿಸಿ, ಬೆಳೆಯ ಆರೋಗ್ಯ ಸಂರಕ್ಷಣೆ ಮತ್ತು ರೋಗ ನಿರ್ವಹಣೆ ಕುರಿತು ಅಧಿಕಾರಿಗಳೊಂದಿಗೆ ಸಂವಾದ ನಡೆಸಿದರು.

## ಮುಂಗಾರಿಗೆ ಎಲ್‌ನಿನೋ ಅಡ್ಡಗಾಲು: ಅನ್ನದಾತರ ಆತಂಕ

• ಪ್ರಜೋದಯ ವರದಿ

**ಬೆಂಗಳೂರು:** ಮುಂಗಾರು ಮಳೆ ಆರಂಭವಾಗುತ್ತಿದ್ದಂತೆಯೇ ಉತ್ತಮ ಮಳೆಯ ನಿರೀಕ್ಷೆಯಲ್ಲಿದ್ದ ಜನರಿಗೆ ಇದೀಗ ನಿರಾಸೆಯ ಸುದ್ದಿ ಎದುರಾಗಿದೆ. ರಾಜ್ಯದಲ್ಲಿ ಜೂನ್ ಮೊದಲ ವಾರದಲ್ಲಿ ಮುಂಗಾರು ಪ್ರವೇಶಿಸಿದರೂ, ಆರಂಭಿಕ ಚುರುಕಿನ ನಂತರ ಮಳೆಯ ಪ್ರಮಾಣದಲ್ಲಿ ಕುಸಿತ ಕಂಡುಬಂದಿದ್ದು, ಮುಂದಿನ ದಿನಗಳಲ್ಲಿಯೂ ನಿರೀಕ್ಷೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ.

ಜೂನ್ 4ರಿಂದ ರಾಜ್ಯದಲ್ಲಿ ಮುಂಗಾರು ಮಳೆ ಆರಂಭವಾಗಿದ್ದು, ಈ ಬಾರಿ ಉತ್ತಮ ಮಳೆಯ ನಿರೀಕ್ಷೆಯಲ್ಲಿ ರೈತರು ಬಿತ್ತನೆ ಕಾರ್ಯಗಳಿಗೆ ಸಿದ್ಧತೆ ನಡೆಸಿದ್ದರು. ಆದರೆ, ಮುಂಗಾರು ಆರಂಭವಾಗಿ ಕೇವಲ ಒಂದು ವಾರ ಕಳೆದಿದ್ದರೂ ಮಳೆಯ ತೀವ್ರತೆ ಕಡಿಮೆಯಾಗಿದ್ದು, ಹಲವು ಜಿಲ್ಲೆಗಳಲ್ಲಿ ಮಳೆ ವಿರಳವಾಗಿದೆ. ಅದರಿಂದ ರೈತಾಪಿ ವರ್ಗದಲ್ಲಿ ಆತಂಕ ಹೆಚ್ಚಾಗಿದೆ.

ತಜ್ಞರ ಪ್ರಕಾರ, ಪೆಸಿಫಿಕ್ ಮಹಾಸಾಗರದ ಮಧ್ಯ ಹಾಗೂ ಪೂರ್ವ ಭಾಗಗಳಲ್ಲಿ ಸಮುದ್ರದ ಮೇಲ್ಮೈ ತಾಪಮಾನ ಅಸಹಜವಾಗಿ ಏರಿಕೆಯಾಗುತ್ತಿರುವುದು ಪ್ರಮುಖ ಕಾರಣವಾಗಿದೆ. ಈ ಹವಾಮಾನ ಸ್ಥಿತಿಯನ್ನು "ಎಲ್‌ನಿನೋ" ಎಂದು ಕರೆಯಲಾಗುತ್ತದೆ. ಎಲ್‌ನಿನೋ ಪರಿಣಾಮದಿಂದ ಜಾಗತಿಕ ಹವಾಮಾನ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಗಿ, ಭಾರತದ ಮುಂಗಾರು ಮಳೆಯ ಪ್ರಮಾಣ ಮತ್ತು ಹಂಚಿಕೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಸಾಮಾನ್ಯವಾಗಿ ಎಲ್‌ನಿನೋ ಸಂಭವಿಸುವ ವರ್ಷಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಹೆಚ್ಚಿರುತ್ತದೆಂದು ಹವಾಮಾನ ತಜ್ಞರು ವಿವರಿಸುತ್ತಾರೆ.

ಕರ್ನಾಟಕದಲ್ಲೂ ಇದರ ಪರಿಣಾಮ ಗೋಚರಿಸುವ ಸಾಧ್ಯತೆ ಇದೆ. ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದ್ದರೂ, ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನ ಸುಮಾರು 19 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ.

### ಅಪಘಾತದಲ್ಲಿ ವ್ಯಕ್ತಿ ಸಾವು

ಬೇಲೂರು: ಟಾಟಾ ಏಸ್ ವಾಹನ ಡಿಕ್ಕಿಯಾಗಿ ಗಂಭೀರ ಗಾಯಗೊಂಡಿದ್ದ ಬೈಕ್ ಸವಾರ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹಳೇಬೀಡು ರಸ್ತೆಯ ಯಗಚಿ ವಸತಿ ಗೃಹ ಗೇಟ್ ಬಳಿ ನಡೆದಿದೆ. ಪಟ್ಟಣದ ಸರ್ದಾರ್ ಪಾಷಾ ಮೃತರು. ಶುಕ್ರವಾರ ಬೆಳಿಗ್ಗೆ 11ರ ಸಮಯದಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದಾಗ ಟಾಟಾ ಏಸ್ ಚಾಲಕ ಏಕಾಏಕಿ ವಾಹನವನ್ನು ಬಲಕ್ಕೆ ತಿರುಗಿಸಿದ್ದರಿಂದ ಬೈಕ್‌ಗೆ ಡಿಕ್ಕಿ ಯಾಗಿದೆ. ಅಪಘಾತದ ರಭಸಕ್ಕೆ ನೆಲಕ್ಕೆ ಬಿದ್ದ ಪಾಷಾ ಅವರನ್ನು ಸ್ಥಳೀಯರು ತಕ್ಷಣ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗಾಗಿ ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಫಲಕಾರಿಯಾಗಿಲ್ಲ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅರಕಲಗೂಡಿನ 19 ಮಕ್ಕಳ ಮನೆ ಶಾಲೆಯಲ್ಲಿ ಅಕ್ಷರಾಭ್ಯಾಸ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 19 ಮಕ್ಕಳ ಮನೆ ಕೇಂದ್ರಗಳಲ್ಲಿ ಇತ್ತೀಚೆಗೆ ಅಕ್ಷರಾಭ್ಯಾಸ ಕಾರ್ಯಕ್ರಮವು ಸಡಗರದಿಂದ ನಡೆಯಿತು.

ತಾಲ್ಲೂಕಿನ ಹನ್ಯಾಳು, ರಾಮನಾಥಪುರ, ಕಾಳೇನಹಳ್ಳಿ, ಮಧುರನಹಳ್ಳಿ, ಹಂಡ್ರಂಗಿ, ಮಲ್ಲಿಪಟ್ಟಣ, ಹುಲಿಕಲ್, ಬೈಚನಹಳ್ಳಿ, ಸಂತೆಮರೂರು, ಹೊನ್ನೇನಹಳ್ಳಿ, ಕೋಟೆ ಅರಕಲಗೂಡು, ಬಿದರಕ್ಕ, ಓಡನಹಳ್ಳಿ, ಕೇರಳಾಪುರ, ಲಕ್ಕೂರು, ಕಟ್ಟೇಪುರ, ದೊಡ್ಡಬೆಮ್ಮತ್ತಿ, ಶ್ರವಣೂರು ಹಾಗು ಬೋರೆಕೊಪ್ಪಲು ಗ್ರಾಮದ ಮಕ್ಕಳ ಮನೆ ಕೇಂದ್ರಗಳಲ್ಲಿ ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ಎಂಬ ಮಂಗಳ ಶ್ಲೋಕದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಪಾಲಕರು ತಮ್ಮ ಮಕ್ಕಳೊಂದಿಗೆ ಭಾಗವಹಿಸಿ, ಸಂಪ್ರದಾಯಬದ್ಧವಾಗಿ ವಿದ್ಯಾರಂಭ ನೆರವೇರಿಸಿದರು.

ವಿವಿಧ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಮನೆಗಳನ್ನುಆರಂಭಿಸಲಾಗಿದ್ದು, ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣ ಒದಗಿಸಲಾಗುತ್ತಿದೆ. ಈ ಮಕ್ಕಳ ಮನೆಗಳಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ವಿಶೇಷವಾಗಿ ಆಯೋಜಿಸಿ ಮಕ್ಕಳ ಶೈಕ್ಷಣಿಕ ಪಯಣಕ್ಕೆ ಶುಭಾರಂಭ ಮಾಡಲಾಯಿತು.

ಪುರೋಹಿತರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಕರು ಮಕ್ಕಳ ಕೈ ಹಿಡಿದು ಅಕ್ಷತೆ ಹಾಗೂ ಅಕ್ಕಿ ತುಂಬಿದ ತಟ್ಟೆಯಲ್ಲಿ ಓಂ ಬರೆಸುವ ಮೂಲಕ ವಿದ್ಯಾಭ್ಯಾಸಕ್ಕೆ ಚಾಲನೆ ನೀಡಿದರು. ಶಾಲಾ ಆವರಣಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿ ಮಕ್ಕಳು, ಪಾಲಕರು ಹಾಗು ಶಿಕ್ಷಕರು ಭಾಗವಹಿಸಿದ್ದರು.

ಶಿಕ್ಷಕರು, ಮಕ್ಕಳ ಮನೆ ಶಿಕ್ಷಕಿಯರು, ಗ್ರಾಮ ಪಂಚಾಯಿತಿ ಸದಸ್ಯರು, ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಹಿರಿಯ ವಿದ್ಯಾರ್ಥಿಗಳು ಹಾಗು ಗ್ರಾಮಸ್ಥರು ಸಹಕಾರ ನೀಡಿದರು. ಮಕ್ಕಳ ಮನೆಗಳಲ್ಲಿ ನಡೆದ ಈ ಅಕ್ಷರಾಭ್ಯಾಸ ಕಾರ್ಯಕ್ರಮವು ಮಕ್ಕಳ ಶೈಕ್ಷಣಿಕ ಜೀವನಕ್ಕೆ ಶುಭಾರಂಭ ನೀಡುವುದರ ಜೊತೆಗೆ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಪರಿಚಯಿಸುವ ಅರ್ಥಪೂರ್ಣ ಕಾರ್ಯಕ್ರಮವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅಕ್ಷರದ ಮೊದಲ ಹೆಜ್ಜೆಯಿಂದ ಜ್ಞಾನದ ಬೆಳಕಿನತ್ತ ಎಂಬ ಸಂದೇಶ ನೀಡಿದೆ ಎಂದು ಪಾಲಕರು ತಮ್ಮ ಅಭಿಪ್ರಾಯ ಹಂಚಿಕೊಂಡರು.

## ಸಿಮೆಂಟ್ ರಸ್ತೆ ಕಾಮಗಾರಿಗೆ ಸಂಸದ ಚಾಲನೆ



• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಾಂತಿಗ್ರಾಮ ಹೋಬಳಿಯ ಸಾತೇನಹಳ್ಳಿ ಹಾಗು ಮರ್ಕುಲಿ ಬಾರೆ ಗ್ರಾಮದಲ್ಲಿ ಸಿಮೆಂಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ಶನಿವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಸಾತೇನಹಳ್ಳಿ ಗ್ರಾಮದ ಮುಖ್ಯ ರಸ್ತೆಯಿಂದ ಅಂಬೇಡ್ಕರ್ ಭವನದವರೆಗೆ ರಸ್ತೆ ನಿರ್ಮಾಣ ಕಾಮಗಾರಿಯು ಗ್ರಾಮಸ್ಥರ ಬಹುಕಾಲದ ಬೇಡಿಕೆಯಾಗಿದ್ದು, ಇದೀಗ ಕಾರ್ಯಗತಗೊಳಿಸಲಾಗಿದೆ. ರಸ್ತೆ ಅಭಿವೃದ್ಧಿಯಿಂದ ಸಾರ್ವಜನಿಕರ ಸಂಚಾರಕ್ಕೆ ಅನು ಕೂಲವಾಗಲಿದೆ. ಗ್ರಾಮದ ಮೂಲಸೌಕರ್ಯ ಅಭಿವೃದ್ಧಿಗೆ ಮತ್ತೊಂದು ಹೆಜ್ಜೆಯಾಗಿದೆ ಎಂದು ಹೇಳಿದರು.

ಅದೇ ರೀತಿ ಶಾಂತಿಗ್ರಾಮ ಹೋಬಳಿ ಮರ್ಕುಲಿ ಬಾರೆ ಗುಂಪಿನ ಮನೆ ಗ್ರಾಮದಿಂದ ಮಳಲಿ ಮುಖ್ಯ ರಸ್ತೆಯವರೆಗೆ ನಿರ್ಮಾಣಗೊಳ್ಳಲಿರುವ ಸಿಮೆಂಟ್ ರಸ್ತೆ ಕಾಮಗಾರಿಯು ಪೂರ್ಣಗೊಂಡ ಬಳಿಕ ಸಂಚಾರ ವ್ಯವಸ್ಥೆ ಸುಗಮವಾಗಲಿದೆ. ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿಗೆ ಮತ್ತಷ್ಟು ಬಲ ದೊರೆಯಲಿದೆ ಎಂದು ಹೇಳಿದ ಅವರು, ಹಾಗು ಗುತ್ತಿಗೆದಾರರು ಕಾಮಗಾರಿಯನ್ನು ಗುಣಮಟ್ಟದಿಂದ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿದರು.

ಸ್ಥಳೀಯ ಮುಖಂಡರು, ಗ್ರಾಮಸ್ಥರು ಹಾಗು ಅಧಿಕಾರಿಗಳು ಉಪಸ್ಥಿತರಿದ್ದರು. ಬಳಿಕ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿ ಮೈಸೂರು ಹೋಬಳಿ ಮೆಣಗನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಸಂಸದರು, ಊರಿನ ಮುಖಂಡರು ಹಾಗೂ ಗ್ರಾಮಸ್ಥರೊಂದಿಗೆ ಗ್ರಾಮದ ಅಭಿವೃದ್ಧಿ ಮತ್ತು ಸಾರ್ವಜನಿಕ ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು.

**ರಾಜಣ್ಣ, ಕ್ರೀಡಾಪಟು ಕಾರ್ತಿಕ್‌ಗೆ ನುಡಿನಮನದಲ್ಲಿ ವಿಜಯಕುಮಾರ್ ಸ್ಮರಣೆ**

## ಮಾದಿಗ ದಂಡೋರ ಚಳವಳಿಗೆ ಹಲವರ ಶ್ರಮ

• ಪ್ರಜೋದಯ ವರದಿ




**ಹಾಸನ:** ಜಿಲ್ಲೆಯಲ್ಲಿ 2002ರಲ್ಲಿ ಮಾದಿಗ ದಂಡೋರ ಚಳುವಳಿಗೆ ಅಧಿಕೃತ ಚಾಲನೆ ದೊರೆತಿದ್ದು, ಅಂದಿನಿಂದ ಸಂಘಟ ಕಟ್ಟುವಲ್ಲಿ ಹಲವಾರು ಮುಖಂಡರು ಮಹತ್ವದ ಪಾತ್ರ ವಹಿಸಿದ್ದಾರೆಂದು ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್.ವಿಜಯಕುಮಾರ್ ಅವರು ಹೇಳಿದರು.

ನಗರದ ಸ್ವಾಭಿಮಾನ ಭವನದಲ್ಲಿ ಕರ್ನಾಟಕ ಮಾದರ ಮಹಾಸಭಾ, ಮಾದಿಗ ದಂಡೋರ, ಕರ್ನಾಟಕ ಮಾದರ ನೌಕರರ ಸಂಘದ ವತಿಯಿಂದ ಕಾಫಿಪುಡಿ ರಾಜಣ್ಣ ಹಾಗು ಕ್ರೀಡಾಪಟು ಕಾರ್ತಿಕ್ ಅವರ ಸ್ಮರಣಾರ್ಥ ಶನಿವಾರ ಹಮ್ಮಿಕೊಂಡಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 16 ವರ್ಷಗಳಲ್ಲಿ ಸಮಾಜದ ಸಂಘ ಟನೆಗಾಗಿ ಶ್ರಮಿಸಿದ ಹಲವು ಚೇತನಗಳನ್ನು ನಾವು ಕಳೆದುಕೊಂಡಿದ್ದು, ಮೊದಲ ಅಧ್ಯಕ್ಷ ಎನ್.ಸಿ. ಮರಿಯಪ್ಪ, ಚನ್ನಯ್ಯ, ಶಿವಮ್ಮ ಸಾಲಿ, ತ್ಯಾಗಿ ಅವರ ಅಳಿಯ ವೀರಪ್ಪ ಹಾಗು ಇದೀಗ ಅನ್ನದಾತ ಕಾಫಿಪುಡಿ ರಾಜಣ್ಣ ಅವರ ನಿಧನದಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

1999ರಲ್ಲಿ ಚಳುವಳಿ ಬಲಪಡಿಸಲು ರಾಜಣ್ಣ ಅವರು ವಹಿಸಿದ್ದ ಪಾತ್ರ ಸ್ಮರಿಸಿದ ಅವರು, ಸಮಾಜದ ಯಾವುದೇ ಕಾರ್ಯಕ್ರಮ ನಡೆದರೂ ರಾಜಣ್ಣ ಅವರು ಪತ್ನಿ ಹಾಗು ಮಕ್ಕಳೊಂದಿಗೆ ಆಗಮಿಸಿ ಊಟದ ವ್ಯವಸ್ಥೆ ಮಾಡುವುದರ ಜೊತೆಗೆ ಆರ್ಥಿಕ ಸಹಾಯ ನೀಡುತ್ತಿದ್ದರು. ಕೇಳದಿ ದ್ದರೂ ಸಮಾಜದ ಮೇಲಿನ ಕಾಳಜಿಯಿಂದ ನೆರವು ನೀಡುತ್ತಿದ್ದ ಅವರ ಉದಾರ ಮನೋಭಾವ ಎಲ್ಲರಿಗೂ ಮಾದರಿ. ಅನ್ನ ಹಾಕುವುದರಲ್ಲಿ ಅವರೇ ಶ್ರೀಮಂತರು ಎಂದು ಭಾವುಕರಾಗಿ ನುಡಿದರು.

ಕ್ರೀಡಾಪಟು ಕಾರ್ತಿಕ್, ಕ್ರೀಡಾ ಕ್ಷೇತ್ರದಲ್ಲಿ ತಮ್ಮದೇ ಸಾಧನೆ ಹಾಗು ಪ್ರತಿಭೆಯಿಂದ ಗುರುತಿಸಿಕೊಂಡು ಯುವಜನತೆಗೆ ಸ್ಫೂರ್ತಿಯಾಗಿದ್ದರು ಎಂದರು. ಈ ಇಬ್ಬರ ಸಮಾಜಮುಖಿ ವ್ಯಕ್ತಿತ್ವಗಳನ್ನು ಸ್ಮರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಅವರ ಸೇವೆ ಮತ್ತು ಸಾಧನೆ ಸದಾ ನೆನಪಿನಲ್ಲಿ ಉಳಿಯಲಿವೆ ಎಂದರು.

ಬೇಲೂರಿನ ಚಂದನಕುಮಾರ್ ಮೆಲೋಡಿಸ್ ತಂಡದ ಸಂಗಮ ಸಂಗೀತ ಹಾಗು ಕ್ರಾಂತಿ ಗೀತೆಗಳ ಗಾಯನ ಗಮನ ಸೆಳೆಯಿತು. ಈ ವೇಳೆ ಜಿಲ್ಲಾ ಮಾದರ ನೌಕರರ ಸಂಘದ ಅಧ್ಯಕ್ಷ ಹೆಚ್.ಆರ್.ಯಶೋಧರ, ನಿವೃತ್ತ ಡಿಡಿಪಿಐ ಎನ್.ಡಿ.ಸಾಲಿ, ಕೆ.ಎಂ.ನಾಗರಾಜು, ದಲಿತ ಮುಖಂಡ ಹೆಚ್.ಕೆ. ಸಂದೇಶ್, ಹೆಚ್‌ಡಿಸಿಸಿ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಹೇಮಂತ್, ಎಸ್‌ಸಿ-ಎಸ್‌ಟಿ ನೌಕರರ ಸಂಘದ ದೊಡ್ಡಮಗ್ಗೆ ರಾಜೇಂದ್ರ, ಅರಸೀಕೆರೆ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಗುತ್ತಿನಕೆರೆ ಶಿವಮೂರ್ತಿ, ಬಸವಾಪುರ ಆಡಳಿತ ಮಂಡಳಿ ಸದಸ್ಯ ರವೀಶ್, ಸುಬ್ಬಣ್ಣ ಶೆಟ್ಟಿ, ರಾಜಣ್ಣ ಅವರ ಪತ್ನಿ ಪುಟ್ಟಮ್ಮ ಇದ್ದರು.

## ವಾಯುಪಡೆ ವಿಮಾನ ಪತನ: ಐವರು ಸಿಬ್ಬಂದಿ ಸಾವು

**ಜೋರ್ಹತ್:** ಅಸ್ಸಾಂನ ಜೋರ್ಹತ್ ಜಿಲ್ಲೆಯಲ್ಲಿ ಲ್ಯಾಂಡಿಂಗ್ ವೇಳೆ ಭಾರತೀಯ ವಾಯು ಪಡೆಯ (ಐಎಎಫ್) ವಿಮಾನ ಎಎನ್-32 ಪತನಗೊಂಡಿದ್ದು ಐವರು ವಾಯುಪಡೆ ಸಿಬ್ಬಂದಿ ಸಾವನ್ನಪ್ಪಿದ್ದಾರೆಂದು ರಕ್ಷಣಾ ವಕ್ತಾರರು ಶನಿವಾರ ತಿಳಿಸಿದ್ದಾರೆ.

ಜೋರ್ಹತ್‌ನ ರೌರಿಯಾ ಪ್ರದೇಶದಲ್ಲಿರುವ ಐಎಎಫ್ ವಾಯುನೆಲೆಯಲ್ಲಿ ವಿಮಾನ ಇಳಿಯುತ್ತಿದ್ದಾಗ ಈ ಘಟನೆ ಸಂಭವಿಸಿದೆ. ದುರಂತದಲ್ಲಿ ಮೃತಪಟ್ಟವರನ್ನು ಸ್ಕ್ವಾಡ್ರನ್ ಲೀಡರ್ ಪ್ರಶಾಂತ್ ಸಿಂಗ್, ಲೆಫ್ಟಿನೆಂಟ್ ಶುಭಂ ಕುಮಾರ್, ಸಾರ್ಜೆಂಟ್ ಜಿತೇಂದ್ರ ಶರ್ಮಾ, ಅಗ್ನಿವೀರ್ (ಏರ್) ಖೇಮರಾಮ್ ಕುಮಾವತ್ ಮತ್ತು ಅಗ್ನಿವೀರ್ (ಏರ್) ಡ್ಯಾನಿಶ್ ಆಲಂ ಎಂದು ಗುರುತಿಸಲಾಗಿದೆ.

ಶನಿವಾರ ಬೆಳಿಗ್ಗೆ 10 ಗಂಟೆ ವೇಳೆಗೆ ಜೋರ್ಹತ್‌ನಲ್ಲಿ ನಿಯಮಿತ ತರಬೇತಿ ಹಾರಾಟದ ಸಮಯದಲ್ಲಿ ಅಪಘಾತ ಸಂಭವಿಸಿದೆ. ವಿಮಾನ ರನ್‌ವೇನಲ್ಲಿ ಇಳಿಯುವಾಗ ನಿಯಂತ್ರಣ ತಪ್ಪಿ ವಾಯುಪಡೆ ನಿಲ್ದಾಣದ ಆವರಣದೊಳಗೆ ಪತನಗೊಂಡಿದೆ. ಬಿದ್ದ ತಕ್ಷಣ ವಿಮಾನದಲ್ಲಿ ಭಾರೀ ಪ್ರಮಾಣದ ಬೆಂಕಿ ಕಾಣಿಸಿಕೊಂಡಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೆಂಕಿ ನಂದಿಸಲು ಮತ್ತು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ತಕ್ಷಣವೇ ತುರ್ತು ರಕ್ಷಣಾ ತಂಡಗಳನ್ನು ನಿಯೋಜಿಸಲಾಯಿತು. ಆದಾಗ್ಯೂ, ಸಿಬ್ಬಂದಿ ರಕ್ಷಿಸಲು ಸಾಧ್ಯವಾಗಲಿಲ್ಲವೆಂದು ಅವರು ಹೇಳಿದ್ದಾರೆ. ಘಟನೆ ಬಗ್ಗೆ ವಾಯುಪಡೆ ವಿಷಾದ ವ್ಯಕ್ತಪಡಿಸಿದ್ದು ದುಃಖತಪ್ತ ಕುಟುಂಬಗಳ ಬೆಂಬಲಕ್ಕೆ ನಿಲ್ಲುವುದಾಗಿ ತಿಳಿಸಿದೆ.

ಘಟನೆಗೆ ನಿಖರ ಕಾರಣ ಏನೆಂಬುದನ್ನು ಪತ್ತೆಹಚ್ಚಲು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ ಎಂದು ವಾಯುಪಡೆಯ ಮೂಲಗಳು ತಿಳಿಸಿವೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019